

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor: MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 06 Issue : 282 Friday 19-07-2024 E-mail : maruti.b.hosamani76@gmail.com Page: 4 Price : Rs. 1/-


## ಭುವನ ಸುಂದರಿ ಡಾ. ಶೃತಿ ಹೆಗಡೆಗೆ ಸನ್ಮಾನ



**ಹುಬ್ಬಳ್ಳಿ :** ಅಮೇರಿಕಾದ ಫ್ಲೋರಿಡಾದಲ್ಲಿ ನಡೆದ ಮಿಸ್ ಯೂನಿವರ್ಸಲ್ ಪಿಟೈಟ್–2024 (ಭುವನ ಸುಂದರಿ) ಸ್ಪರ್ಧೆಯಲ್ಲಿ ಭಾರತ ದೇಶವನ್ನು ಪ್ರತಿನಿಧಿಸಿ 40 ದೇಶದ ಸುಂದರ ಸ್ಪರ್ಧಿಗಳನ್ನು ಹಿಂದಿಕ್ಕಿ ಮಿಸ್ ಯೂನಿವರ್ಸಲ್ ಪ್ರಶಸ್ತಿಯನ್ನು ಗೆದ್ದು ಭಾರತಕ್ಕೆ ಹೆಮ್ಮೆ ತಂದ ಡಾ.ಶೃತಿ ಹೆಗಡೆಯವರನ್ನು "ಶರಣರ ಶಕ್ತಿ" ಚಿತ್ರ ತಂಡದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಪ್ರಶಸ್ತಿ ಗೆದ್ದು ಪ್ರಥಮ ಬಾರಿಗೆ ಹುಬ್ಬಳ್ಳಿ ನಗರ–ಕ್ಕೆ ಆಗಮಿಸಿದ ಅವರನ್ನು ಉಣಕಲ್ ಮುಖ್ಯ ರಸ್ತೆಯಿಂದ ಲಿಂಗರಾಜ ನಗರದ ಸಾಂಸ್ಕೃತಿಕ ಸಮುದಾಯ ಭವನದ ವರೆಗೂ ವಿವಿಧ ಕಲಾ ತಂಡಗಳು, ವಾದ್ಯಮೇಳ, ಗೊಂಬೆಕುಣಿತದ ತಂಡಗಳೊಂದಿಗೆ ಕಾರಿನಲ್ಲಿ ಭವ್ಯ ಮೆರವಣಿಗೆ ಮೂಲಕಕರೆತರಲಾಯಿತು. ಸಮುದಾಯಭವನದಲ್ಲಿ ಮಹಿಳೆಯರು ಆರತಿ ಬೆಳಗಿ ಸ್ವಾಗತಿಸಿದರು. ಈ ಸಂದರ್ಭದಲ್ಲಿ ಸಮುದಾಯ ಭವನದ ಆವರಣದಲ್ಲಿ ನೆರೆದ ನೂರಾರು ಗಣ್ಯ ಮಾನ್ಯರು ಅಭಿಮಾನಿಗಳವರ ಸಮ್ಮುಖದಲ್ಲಿ ಡಾ.ಶೃತಿ ಅವರು ಭಾರತದ ತ್ರಿವರ್ಣ ಧ್ವಜ ಹಿಡಿದು ರೆಡ್ ಕಾರ್ಪೆಟ್‌ನಲ್ಲಿ ರ್ಯಾಂಪ್. ವಾಕ್ ಮಾಡಿದರು. ನಂತರ ನಡೆದ ಕಾರ್ಯಕ್ರಮದಲ್ಲಿ ಭುವನ ಸುಂದರಿ ಕಿರೀಟ ಗೆದ್ದ ವಿಡಿಯೋವನ್ನು ಮತ್ತು ದಿಲೀಪ ಶರ್ಮ ನಿರ್ದೇಶನದ ಶ್ರೀಮತಿ ಆರಾಧನಾ ಕುಲಕರ್ಣಿ ನಿರ್ಮಿಸಿರುವ ಅಗಷ್ಟ ತಿಂಗಳು ಬಿಡುಗಡೆ ಯಾಗಲಿರುವ "ಶರಣರ ಶಕ್ತಿ" ಚಲನ ಚಿತ್ರದಲ್ಲಿ ಡಾ.ಶೃತಿ ಅವರು ಶರಣೆ ಸೂಳೆ ಸಂಕವ್ವೆಯ ಪಾತ್ರದಲ್ಲಿ ಅಭಿನಯಿಸಿರುವ ಹಾಡನ್ನು ವೇದಿಕೆಯಲ್ಲಿ ಪ್ರದರ್ಶಿಸಲಾಯಿತು.

ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಪಾಲಿಕೆ ಸದಸ್ಯ ರಾಜಣ್ಣ ಕೊರವಿ, ನಾಟ್ಯಾಂಜಲಿ ಕೇಂದ್ರದ ವಿದುಷಿ ಸಹನಾ ಭಟ್, ಚೇತನಾ ಪಬ್ಲಿಕ್ ಶಾಲೆಯ ಮುಖ್ಯಸ್ಥ ಮಹೇಶ ದ್ಯಾವಪ್ಪನವರ, ಮಂಜುನಾಥಗೌಡ ಪಾಟೀಲ, ಗಿರಿಜಾ ಸಂಗೊಳ್ಳಿ, ಡಾ.ರಮೇಶ, ಝುಡ್.ಎಂ.ಮುಲ್ಲ, ಅಕ್ಕಮ್ಮ ಹೆಗಡೆ, ಎಂ.ಎ.ಕರಿಗೌಡರ, ಡಾ.ವಿ.ಎಂ.ಭಟ್, ವೈಶಾಲಿ ಅಥಣಿ ಮೊದಲಾದವರು ಆಗಮಿಸಿದ್ದರು. ವೇದಿಕೆಯಲ್ಲಿ ತಂದೆ ಡಾ.ಕೃಷ್ಣ.ಎಂ.ಹೆಗಡೆ, ತಾಯಿ ಕಮಲಾ ಹೆಗಡೆ ಉಪಸ್ಥಿತರಿದ್ದರು.

ಎಂ.ಬಿ.ಬಿ.ಎಸ್.ಮುಗಿಸಿ, ಎಂ.ಡಿ ಮಾಡುತ್ತಿರುವ ಡಾ.ಶೃತಿ ಅವರನ್ನು ಈ ಸಂದರ್ಭದಲ್ಲಿ "ಶರಣ–ರ ಶಕ್ತಿ" ಚಲನ ಚಿತ್ರದಲ್ಲಿ ಬಸವಣ್ಣನವರ ಪಾತ್ರ ನಿರ್ವಹಿಸಿದ ಮಂಜುನಾಥ ಗೌಡ ಪಾಟೀಲ್, ನಗೆಮಾರಿ ತಂದೆ ಪಾತ್ರ ಮಾಡಿದ ವಿನೋದ ದಂಡಿನ್, ಚಲನ ಚಿತ್ರದ ಪಿಆರ್‌ಓ ಡಾ.ಪ್ರಭು ಗಂಜಿಹಾಳ, ಡಾ.ವೀರೇಶ ಹಂಡಿಗಿ ಮತ್ತು ಪ್ರಶಾಂತ ಚಿತ್ರ ತಂಡದ ಸದಸ್ಯರು ಸನ್ಮಾನಿಸಿ ಶುಭ ಕೋರಿದರು. ವಿವಿಧ ಸಂಘ ಸಂಸ್ಥೆಗಳು ಕೂಡ ಸನ್ಮಾನಿಸಿ ಗೌರವಿಸಿದರು.

**ವರದಿ: ಡಾ.ಪ್ರಭು ಗಂಜಿಹಾಳ, ಮೊ: 9448775346**

## ಗೋಮರ್ಸಿಯಲ್ಲಿ ಜರುಗಿದ ಅದ್ದೂರಿ ಮೊಹರಂ ಹಬ್ಬದ ಆಚರಣೆ





**ಗೋಮರ್ಸಿ :** ಹಿಂದೂ ಮುಸ್ಲಿಮರ ಭಾವೈಕ್ಯತೆಯ ಪವಿತ್ರ ಮೊಹರಂ ಹಬ್ಬದ ಆಚರಣೆಯು ಸಿಂಧನೂರು ತಾಲೂಕಿನ ಗೋಮರ್ಸಿ ಗ್ರಾಮದಲ್ಲಿ ಬಹಳ ವಿಶಿಷ್ಟ ಹಾಗೂ ವಿಜೃಂಭಣೆಯಿಂದ ನಡೆಯಿತು. ಮೊಹರಂ ಕಡೆ–ಯ ದಿನವಾದ ಬುಧವಾರ ಗೋಮರ್ಸಿ ಗ್ರಾಮದಿಂದ ಬೆಳಿಗ್ಗೆ ಐದು ಗಂಟೆಗೆ ಆರಂಭವಾದ ದೇವರುಗಳ ಸವಾರಿ ಪಕ್ಕದ ಮಾಡಶಿರಿವಾರ ಹಾಗೂ ಕನ್ನಾರಿ ಗ್ರಾಮಗಳಿಗೆ ತೆರಳಿ ತಲ ತಲಾಂತರದಿಂದ ಬಂದ ಆಲಾಯಿ ಬಿಲಾಯಿ ಮಾಡುವ ಸಂಪ್ರದಾಯದಂತೆ ಈ ವರ್ಷವೂ ಸಹ ನಡೆಯಿತು. ಈ ಸಂದರ್ಭದಲ್ಲಿ ಸಾವಿರಾರು ಜನ ಮಸೀದಿ ಬಳಿ ಸೇರಿ ರೋಮಾಂಚನದ ಸಂದರ್ಭವನ್ನು ಕಣ್ಣು ತುಂಬಿಕೊಂಡು ತಮ್ಮ ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಹರಕೆಯನ್ನು ತೀರಿಸಿ ಹಸೇನ್, ಹುಸೇನ್ ದೇವರುಗಳ ಆಶೀರ್ವಾದವನ್ನು ಪಡೆದರು. ಗೋಮರ್ಸಿ ಗ್ರಾಮದಲ್ಲಿ ಇನ್ನೂ ಅದ್ದೂರಿಯಾಗಿ ಊರಿನ ಸರ್ವ ಜನಾಂಗದ ಸಹ ಭಾಗಿತ್ವದಲ್ಲಿ ಮೊಹರಂ ಹಬ್ಬದ ಕೊನೆಯ ದಿನದ ವಿಶಿಷ್ಟ ಆಚರಣೆಗಳನ್ನು ನೆರವೇರಿಸಿ. ನೂರಾರು ಯುವಕರು ಕುಣಿದು ಕುಪ್ಪಳಿಸಿ ಮೆರಗನ್ನು ತಂದರು. ಗೋಮರ್ಸಿ ಗ್ರಾಮದ ಮೊಹರಂ ಹಬ್ಬವು ಸಿಂಧನೂರು ತಾಲೂಕಿನಲ್ಲಿ ನಡೆಯುವ ವಿಶಿಷ್ಟ ಆಚರಣೆಗಳಲ್ಲಿ ಒಂದಾಗಿದೆ. ಈ ಹಬ್ಬವು ಸುಗ್ಗಿಯ ಪೂರ್ವದಲ್ಲಿ ರೈತರ ಒಗ್ಗೂಡುವಿಕೆ, ಕುಶಿ, ಸಂತೋಷ, ನೆಮ್ಮದಿಯ ನೆರವೇರಿಕೆ ಮುಂಗಾರು ಹಾಗೂ ಹಿಂಗಾರು ಮಳೆ ಹಾಗೂ ಗ್ರಾಮದ ಜನ ಜೀವನದ ಬಗ್ಗೆ ವಿಶೇಷ ಹೇಳಿಕೆ ಕಾರ್ಯ ಜರುಗುವ ಕಾರ್ಯಕ್ರಮ ವಿಶೇಷತೆಯಿಂದ ಕೂಡಿರುತ್ತದೆ ಎಂದು ಮೊಹರಂ ಹಬ್ಬದ ಆಚರಣೆ ಸಮಿತಿಯ ಸದಸ್ಯ ಮುತ್ತವಲಿ ತಿಳಿಸಿದರು. ಇದೇ ಸಂದರ್ಭದಲ್ಲಿ ಗೋಮರ್ಸಿ ಗ್ರಾಮದ ಗುರು ಹಿರಿಯರು, ಗ್ರಾಮ ಪಂಚಾಯಿತಿ ಸರ್ವ ಸದಸ್ಯರು, ಸಮಿತಿ ಸದಸ್ಯರು, ಭಾಗವಹಿಸಿದ್ದರು.

**ತಾಲೂಕ ವರದಿಗಾರರು,**
**ಸಿಹಿ ಕಹಿ ಕನ್ನಡ ದಿನ ಪತ್ರಿಕೆ**
**ಹಾಗೂ ಎಸ್.ಕೆ ನ್ಯೂಸ್ ಕನ್ನಡ**
**ಚಾನಲ್:ಪ್ರತಾಪ್ ವಾಯ್.ಕಿಳ್ಳಿ.**
**ಇಲಕಲ್ಲ.**

## ಸಚಿವ ಸ್ಥಾನದ ಆಕಾಂಕ್ಷಿಯಲ್ಲ: ಶಾಸಕ ಡಾ. ಎನ್.ಟಿ. ಶ್ರೀನಿವಾಸ್ ಸ್ಪಷ್ಟನೆ



**ಕೂಡ್ಲಿಗಿ :** ವಿಧಾನ ಸಭಾ ಕ್ಷೇತ್ರದಲ್ಲಿ ಎಲ್ಲಾ ಮತದಾರ ಮುಖಂಡರ ಪ್ರೀತಿ ವಿಶ್ವಾಸ ದಿಂದ ಮೊದಲ ಬಾರಿಗೆ ನಾನು ಶಾಸಕನಾಗಿ ಆಯ್ಕೆಯಾಗಿದ್ದು, ಕ್ಷೇತ್ರದ ಜನ ನನ್ನನ್ನು ಶಾಸಕನಾಗಿ ಆಯ್ಕೆ ಮಾಡಿದ್ದಾರೆ. ಕೂಡ್ಲಿಗಿ ವಿಧಾನ ಸಭಾ ಕ್ಷೇತ್ರದಲ್ಲಿ ಸೇವೆ ಮಾಡಲು ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ. ನಾನು ವೃತ್ತಿಯಲ್ಲಿ ವೈದ್ಯನಾಗಿದ್ದ ರಿಂದ ರಾಜಕೀಯದಲ್ಲಿ ಸಾಕಷ್ಟು ಕಲಿಯುವುದು ಅವಶ್ಯಕತೆ ಇದೆ. ರಾಜಕೀಯದಲ್ಲಿ ಕೆಲವೊಂದು ಜವಾಬ್ದಾರಿ ಸ್ಥಾನ ನಿರ್ವಹಿಸ ಬೇಕೆಂದರೆ ಅನುಭವ ಬೇಕು. ನನಗೆ ರಾಜಕೀಯದಲ್ಲಿ ಸ್ವಲ್ಪ ಅನುಭವ ಕೊರತೆ ಇದೆ ಎಂಬುದು ನನ್ನ ಭಾವನೆ. ನನ್ನ ಉದ್ದೇಶ ಕೂಡ್ಲಿಗಿ ವಿಧಾನ ಸಭಾ ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿ ಮಾಡುವುದೇ ನನ್ನ ಗುರಿ ನನಗೆ ಯಾವುದೇ ಸಚಿವ ಸ್ಥಾನದ ಆಕಾಂಕ್ಷಿಯಲ್ಲ. ಆದರೆ, ನನ್ನ ಮೇಲಿನ ಪ್ರೀತಿ ವಿಶ್ವಾಸ ದಿಂದ ಕ್ಷೇತ್ರದ ಅಭಿಮಾನ ದಿಂದ ನಮ್ಮ ಕ್ಷೇತ್ರದ ಛಲವಾದಿ ಮಹಾಸಭಾ ಪದಾಧಿಕಾರಿಗಳು ಕೂಡ್ಲಿಗಿ ಕ್ಷೇತ್ರದ ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಅವರಿಗೆ ಸಚಿವ ಸ್ಥಾನ ನೀಡುವಂತೆ ಒತ್ತಾಯಿಸಿರುವುದು. ಪತ್ರಿಕೆಗಳಲ್ಲಿ ವರದಿ ಬಂದ ನಂತರವೇ ನನಗೆ ಗೊತ್ತಾಗಿದೆ. ನಿಮ್ಮೆಲ್ಲರ ಪ್ರೀತಿ ವಿಶ್ವಾಸ ಹೀಗೆ ಇರಲಿ. ನಾನು ಇನ್ನೂ ಆ ದೊಡ್ಡ ಮಟ್ಟಕ್ಕೆ ರಾಜಕೀಯದಲ್ಲಿ ಬೆಳೆದಿಲ್ಲ ಮೊದಲ ಬಾರಿ ಪಾದರ್ಪಣೆ ಈ ಕ್ಷೇತ್ರದ ಶಾಸಕ ನಾಗಿದ್ದೇನೆ ರಾಜಕೀಯ ಕ್ಷೇತ್ರದಲ್ಲಿ ನಮ್ಮ ವಾಲ್ಮೀಕಿ ಸಮುದಾಯದಲ್ಲಿ ಹಾಗೂ ಕಾಂಗ್ರೆಸ್ ಪಕ್ಷದಲ್ಲಿ ಬಹಳಷ್ಟು ಹಿರಿಯ ಶಾಸಕರಿದ್ದಾರೆ. ನಾನು ಯಾವುದೇ ಸಚಿವ ಸ್ಥಾನದ ಆಕಾಂಕ್ಷಿಯೂ ಅಲ್ಲ ಎಂದು ಶಾಸಕ ಡಾ ಎನ್.ಟಿ ಶ್ರೀನಿವಾಸ್ ಸ್ಪಷ್ಟನೆ ನೀಡಿದ್ದಾರೆ.

**ಹೋಬಳಿ ವರದಿಗಾರರು,**
**ಸಿಹಿ ಕಹಿ ಕನ್ನಡ ದಿನ ಪತ್ರಿಕೆ**
**ಹಾಗೂ ಎಸ್.ಕೆ ನ್ಯೂಸ್ ಕನ್ನಡ**
**ಚಾನಲ್:ಕೆ.ಎಸ್.ವೀರೇಶ್ ಕೆ.**
**ಹೊಸಹಳ್ಳಿ.**

## ಶಾಲಾ ಕೊಠಡಿಯಲ್ಲಿ ಬೆಂಕಿ ಹಚ್ಚಿದ ಕಿಡಗೇಡಿಗಳು



**ತೇರದಾಳ :** ಇಲ್ಲಿನ ತರಕಾರಿ ಮಾರುಕಟ್ಟೆಯಲ್ಲಿರುವ ಸರಕಾರಿ ಉರ್ದು ಶಾಲೆಯ ಏಳನೇ ತರಗತಿ ಕೊಠಡಿಯೊಳಗೆ ಯಾರೋ ಕಿಡಗೇಡಿಗಳು ಸಿಮೇ ಎಣ್ಣೆ ಸಿಂಪಡಿಸಿ ಬೆಂಕಿ ಹಚ್ಚುವ ಕೆಲಸ ಮಾಡಿದ್ದಾರೆ. ಆದರೆ ಅಂತಹ ಯಾವುದೇ ಹಾನಿ ಸಂಭವಿಸದಿರುವುದು ಸಾಮಾಧಾನಕರ ಸಂಗತಿಯಾಗಿದೆ.

ಘಟನೆ ವಿವರ–ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಎಂದಿನಂತೆ ಶುಕ್ರವಾರ ಶಾಲೆಗೆ ಆಗಮಿಸಿದ್ದಾರೆ. ಏಳನೇ ತರಗತಿ ಕೊಠಡಿ ಬಾಗಿಲು ತಗೆಯುತ್ತಿದ್ದಂತೆ ಸುಟ್ಟಿರುವ ವಾಸನೆ ಬಂದಿದೆ. ಶಿಕ್ಷಕರು ಒಳಗೆ ಹೋಗಿ ನೋಡಿದ್ದಾರೆ. ಬೆಂಚ್‌ಗಳಿಗೆ ಹೊಗೆ ಬಡಿದಿದೆ. ಸುಟ್ಟಿದ ಕಾಗದ ಚೂರುಗಳು ಕೆಳಗೆ ಬಿದ್ದಿವೆ. ಗೋಡೆಗೆ ಕಾಡಿಗೆ ಬಡೆದಿದೆ. ಕೊಠಡಿ ತುಂಬ ಸಿಮೇ ಎಣ್ಣೆ ವಾಸನೆ ಬಂದಿದೆ. ಕೂಡಲೇ ಎಸ್ಡಿಎಂಸಿ ಅವರಿಗೆ ವಿಷಯ ತಿಳಿಸಿದ್ದಾರೆ. ಎಸ್ಡಿಎಂಸಿ ಅಧ್ಯಕ್ಷ ಮೌಲಾ ಅಲಿ ಚಿತ್ರಬಾನುಕೋಟೆ ಹಾಗೂ ಪುರಸಭೆ ಸದಸ್ಯ ಪಜಲ್ ಅತಾರಾವುತ್ ಶಾಲೆಗೆ ಬೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಹಿಂದೆಯೂ ಇದೇ ರೀತಿ ಇದೇ ಕೊಠಡಿಗೆ ಮಾಡಿದ್ದರು. ಫ್ಯಾನ್ ಮುರಿದು ಹಾಕಿದ್ದರು. ಆಗ ಘಟನೆ ಕುರಿತು ಪೊಲೀಸರಿಗೆ ಮಾಹಿತಿ ನೀಡಿದ್ದೇವು. ಈಗ ಮತ್ತೆ ಅದೇ ರೀತಿ ಘಟನೆ ಮರಕಳಿಸಿದೆ. ಈಗಲೂ ಘಟನೆ ಕುರಿತು ಠಾಣೆಗೆ ದೂರು ನೀಡಲಾಗುವುದು ಎಂದು ಎಸ್ಡಿಎಂಸಿ ಅಧ್ಯಕ್ಷ ತಿಳಿಸಿದರು. ವಿದ್ಯೆ ಕಲಿಯುವ ಶಾಲೆಗೆ ಬೆಂಕಿ ಹಚ್ಚುವ ಮಟ್ಟಿಗೆ ಕಿಡಗೇಡಿಗಳು ಬೆಳೆದಿದ್ದಾರೆಂದರೆ ಇವರು ಸಮಾಜದಲ್ಲಿ ಅಶಾಂತಿ ಹುಟ್ಟು ಹಾಕುವ ಕೆಲಸ ಮಾಡುತ್ತಿದ್ದಾರೆಂದು ಅಸಮಾಧಾನ ಶಿಕ್ಷಕರು ಹಾಗೂ ಎಸ್ಡಿಎಂಸಿಯವರು ಅಸಮಾಧಾನ ವ್ಯಕ್ತಪಡಿಸಿದರು. ಪಿಎಸ್‌ಐ ಅಪ್ಪಣ್ಣ ಐಗಳಿ ಶಾಲೆಗೆ ಬೇಟಿ ನೀಡಿ ಪರಿಶೀಲನೆ ನಡೆಸಿದರು.

## ಜೀವನದಲ್ಲಿ ನೈತಿಕ ಮೌಲ್ಯಗಳನ್ನು ಮರೆಯದಿರಿ: ಉಪಾಧ್ಯೆ



**ಜಮಖಂಡಿ :** ವಿದ್ಯಾರ್ಥಿ ಬದುಕಿನಲ್ಲಿ ಓದುವುದರ ಜೊತೆಗೆ ನೈತಿಕ ಮೌಲ್ಯಗಳನ್ನು ಅನುಸರಿಸಿ. ತಂದೆ–ತಾಯಿ, ಗುರುಗಳನ್ನು ಗೌರವಿಸುವ ಮನೋಭಾವನೆ ಬೆಳೆಸಿಕೊಂಡು ಅವರು ಹಾಕಿಕೊಟ್ಟ ದಾರಿಯಲ್ಲಿ ಸಾಗಬೇಕು ಎಂದು ಸಾವಳಗಿಯ ಸುಸಂಸ್ಕೃತ ಸೇವಾ ಮಂಚ್ ಅಧ್ಯಕ್ಷ ಪಂಡಿತ ಪಾರ್ಶ್ವನಾಥ ಉಪಾಧ್ಯೆ ಹೇಳಿದರು. ತಾಲೂಕಿನ ಆಲಗೂರ ಗ್ರಾಮದ ಸರಕಾರಿ ಹಿರಿಯಪ್ರಾಥಮಿಕಶಾಲೆಯಲ್ಲಿಹಮ್ಮಿಕೊಂಡಿದ್ದವ್ಯಕ್ತಿತ್ವ ವಿಕಸನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ವಿದ್ಯಾರ್ಥಿಗಳು ಸತತ ಪರಿಶ್ರಮದೊಂದಿಗೆ ಸಾಧಕರಾಗಿ ಜನಿಸಿದ ಗ್ರಾಮಕ್ಕೆ, ಕಲಿತ ಶಾಲೆಗೆ ಕೀರ್ತಿಯನ್ನು ತರುವ ಗುರಿ ಇಟ್ಟುಕೊಳ್ಳದೇ ಮುಂದೆ ಸಾಗುವ ಯೋಚನೆ ಮಾಡಬಾರದು ಎಂದರು.

ವೇದಿಕೆಯಲ್ಲಿ ಶಿಕ್ಷಕಆರ್.ಎಸ್.ದೇಸಾಯಿ, ಶಿವಪ ಪ್ರಥಮಶೆಟ್ಟಿ, ಶಿಕ್ಷಕಿ ಎಸ್.ಐ..ಗೋಡಚಿ ಸಹಿತ ಹಲವರು ಇದ್ದರು.

## ಸಹಕಾರಿ ಸಂಸ್ಥೆಗೆ ಸಾಮುದಾಯಿಕ ಬದ್ಧತೆಯಿದೆ: ಗುರುಸಿದ್ದೇಶ್ವರಶ್ರೀ ಅಭಿಮತ



**ರಬಕವಿ** ಸಹಕಾರಿಸಂಸ್ಥೆಗಳುಜನಸಾಮಾನ್ಯರ ಆರ್ಥಿಕ ಪ್ರಗತಿಗೆ ಬುನಾದಿಯಂತೆ ಕೆಲಸ ಮಾಡುತ್ತಿವೆ. ರಾಷ್ಟ್ರೀಕೃತ ಬ್ಯಾಂಕ್ಗಳಲ್ಲಿ ವ್ಯವಹರಿಸುವ ಸಾಮರ್ಥ್ಯವಿಲ್ಲದ ಸಣ್ಣ ವರ್ತಕರು ಮತ್ತು ಬೀದಿ ವ್ಯಾಪಾರಿಗಳಿಗೂ ಸಹಕಾರಿಗಳು ಆರ್ಥಿಕ ನೆರವು ಕಲ್ಪಿಸಿ ವ್ಯವಹಾರ ಪೂರಕ ಚಟುವಟಿಕೆಗಳಿಗೆ ಉತ್ತೇಜನ ನೀಡುತ್ತಿದ್ದು , ಸಹಕಾರಿಗಳಿಗೆ ಸಾಮುದಾಯಿಕ ಬದ್ಧತೆ ಇದೆ ಎಂಬುದಕ್ಕೆ ಇದೇ ಸ್ಪಷ್ಟ ನಿದರ್ಶನವಾಗಿದೆ ಎಂದು ರಬಕವಿ ಗುರುದೇವ ಬ್ರಹ್ಮಾನಂದ ಆಶ್ರಮದ ಗುರುಸಿದ್ದೇಶ್ವರಶ್ರೀಗಳು ನುಡಿದರು.

ಶುಕ್ರವಾರದಂದು ಪ್ರಗತಿ ಪತ್ತಿನ ಸೌಹಾರ್ದ ಸಹಕಾರಿಸಂಘನಿ.,ಇದರಬಾಗಲಕೋಟೆಯ ನಾಲ್ಕನೆಯ ಶಾಖೆಯಾದ ರಬಕವಿ ಶಾಖಾ ಕಚೇರಿಯನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಆಶೀವ9ಚನ ನೀಡಿದ ಶ್ರೀಗಳು ಸಹಕಾರಿ ಕ್ಷೇತ್ರದ ದಿಗ್ಗಜ ಎಂದೇ ಬಿಂಬಿತರಾಗಿರುವ ಪ್ರಕಾಶ ತಪಶೆಟ್ಟಿಯವರ ನೇತೃತ್ವದ ಸಹಕಾರಿಯು ರಬಕವಿ–ಬನಹಟ್ಟಿ ಸುತ್ತಲಿನ ನಾಗರಿಕರ ಆರ್ಥಿಕ ಸುಭೀಕ್ಷತೆಗೆ ಬುನಾದಿಯಾಗಲೆಂದು ಹಾರೈಸಿದರು. ಶಾಸಕ ಸಿದ್ದೂ ಸವದಿ, ಕಾಂಗ್ರೆಸ್ ಧುರೀಣ ಸಿದ್ದೂ ಕೊಣ್ಣೂರ, ಸಹಕಾರಿಗಳಾದ ಶಂಕರ ಜುಂಜಪ್ಪನವರ, ಸುರೇಶ ಚಿಂಡಕ ಮಾತನಾಡಿ, ಸಹಕಾರಿ ಸಂಘಗಳ ಪ್ರಗತಿಗೆ ಗ್ರಾಹಕರು, ಸೌಜನ್ಯಯುತ ನಡೆಯ ಸಿಬ್ಬಂದಿ ಮತ್ತು ಆರ್ಥಿಕ ಶಿಸ್ತು ಹೊಂದಿರುವ ಆಡಳಿತ ಮಂಡಳಿ ಕಾರಣವಾಗುತ್ತದೆ. ಗ್ರಾಹಕರು ಸಹಕಾರಿ ಬೆಳವಣಿಗೆಗೆ ಪಡೆದ ಸಾಲದ ಸಕಾಲಿಕ ಮರುಪಾವತಿಗೆ ಮುಂದಾದಾಗ ಪ್ರಾದೇಶಿಕ ಆರ್ಥಿಕ ಬೆಳವಣಿಗೆ ಸಾಧ್ಯವೆಂದರು. ಹಿರಿಯ ವೈದ್ಯ ಡಾ. ಅಪ್ಪಾಸಾಹೇಬ ನಾಡಗೌಡಪಾಟೀಲ ಗಣಕ ಯಂತ್ರಗಳ ಉದ್ಘಾಟಿಸಿದರು.

ಪ್ರಧಾನ ಕಚೇರಿ ಅಧ್ಯಕ್ಷ ಪ್ರಕಾಶ ತಪಶೆಟ್ಟಿ ಮಾತನಾಡಿ, ಸಂಸ್ಥೆಯಲ್ಲಿ ಬಂಗಾರ ಸಾಲ, ವಾಹನ ಸಾಲ, ವೇತನಾಧಾರಿತ ಸಾಲ, ಆಸ್ತಿಯಾಧಾರಿತ ಸಾಲ, ಓಡಿ, ಜಾಮೀನು ಸಾಲ ನೀಡಲಾಗುತ್ತದೆ. ಅವಧಿ ಠೇವುಗಳ ಬಡ್ಡಿದರದಲ್ಲಿಯೂ ಹೆಚ್ಚಳವಿದೆ. ಶಾಖೆಗಳು ಸಂಪೂರ್ಣ ಗಣಕೀಕೃತ ಹಾಗೂ ಕೋರ್ ಬ್ಯಾಂಕಿಂಗ್, ಸದಸ್ಯರ ಠೇವಿನ ಬಡ್ಡಿ ಆಕರಣೆಯಲ್ಲಿ ಟಿಡಿಎಸ್ ವಿನಾಯತಿ, ನಾಮನಿರ್ದೇಶನ ಸೌಲಭ್ಯ, ತ್ವರಿತ ಮತ್ತು ವಿನಮ್ರ ಸೇವೆ ನೀಡಲಾಗುತ್ತದೆ. ಸಹಕಾರಿಗಳ ಬೆಳವಣಿಗೆಯಲ್ಲಿ ಸದಸ್ಯರು ಮತ್ತು ಗ್ರಾಹಕರು ನೆರವಾಗಬೇಕೆಂದು ಕೋರಿದರು.

ಶ್ರೀನಿಧಿಸಮೂಹಸಂಸ್ಥೆಯಮಲ್ಲಿಕಾರ್ಜುನ ಬಿ. ನಾಶಿ, ತೇರದಾಳದ ಎಸ್ಡಿಎಂ ಮುಖ್ಯಸ್ಥ ಡಾ. ಮಹಾವೀರ ದಾನಿಗೊಂಡ, ಬಸವರಾಜ ತೆಗ್ಗಿ, ನೀಲಕಂಠ ಮುತ್ತೂರ, ಡಾ. ಜಿ. ಎಚ್. ಚಿತ್ತರಗಿ, ಧನಲಕ್ಷ್ಮೀಯ ಚಿದಾನಂದ ಗಾಳಿ,ಸಂಗಮ ಸೊಸೈಟಿಯ ಶ್ರೀಶೈಲ ಕೌಜಲಗಿ, ಜ್ಯೋತಿ ಸಂಸ್ಥೆಯ ಸಂಜಯ ತೇಲಿ, ಡಿ.ಕೆ. ಕೊಟ್ರಶೆಟ್ಟಿ ಫೌಂಡೇಶನ್ನಿನ ಸೋಮಶೇಖರ ದುಂಡಪ್ಪ ಕೊಟ್ರಶೆಟ್ಟಿ, ಶ್ರೀಶೈಲ ದಲಾಲ, ಬಸವರಾಜ ತೇಲಿ, ಗಜಾನನ ತೆಗ್ಗಿ, ಮಹಾದೇವ ಧುಪದಾಳ, ಪ್ರಭಾಕರ ಢಪಳಾಪುರ, ಶಂಕರ ಬಟಕುರ್ಕಿ, ಮಹಾಲಿಂಗ ಜುಂಜಪ್ಪನವರ, ದಯಾನಂದ ಬಾಗಲಕೋಟ, ಬಸವರಾಜ ಕುಂಚನೂರ, ಮಲ್ಲೇಶಪ್ಪ ಕುಚನೂರ, ಸುರೇಶ ಮುಳವಾಡ, ಸ್ಮಿತಾ ವಿಜಯ ನಾಶಿ, ಸ್ಮಿತಾಅಮಿತ್‌ನಾಶಿ,ಶಿವಪ್ಪಬಾಗಲಕೋಟ, ವಿದ್ಯಾಧರ ಜಯವಂತ ಗುಳ್ಳ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.

## ಭಗವದ್ಗೀತೆ ಗೀತೆ ನಮ್ಮೆಲ್ಲರ ಬದುಕಿನ ಆದರ್ಶಶವಾಗಲಿ: ದಯಾನಂದ ಪಾಟೀಲ





**ಮುಧೋಳ :** ಇಡೀ ಮಾನವ ಜೀವನಕ್ಕೆ ಉತ್ತಮ ಬದುಕಿನ ಸಂದೇಶ ನೀಡುವ ಭಗವಾನ್‌ಶ್ರೀಕೃಷ್ಣನಭಗವದ್ಗೀತೆನಮ್ಮೆಲ್ಲರ ಬದುಕಿನ ಆದರ್ಶವಾಗಲಿ ಎಂದು ಖ್ಯಾತ ಸಮಾಜ ಸೇವಕ ಹಾಗೂ ರಾಜ್ಯ ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ದಯಾನಂದ ಪಾಟೀಲ ಹೇಳಿದ್ದಾರೆ ಅವರು ಜುಲೈ 10 ರಂದು ಸಂಜೆ ಮುಧೋಳದ ಹೇಮರಡ್ಡಿ ಮಲ್ಲಮ್ಮ ಸಭಾಗೃಹದಲ್ಲಿ ಅವರ ಅಭಿಮಾನಿ ಮಿತ್ರರು ಆಯೋಜಿಸಿದ್ದ ತಮ್ಮ50ನೇ ಹುಟ್ಟು ಹಬ್ಬದವೈಶಿಷ್ಟ್ಯಪೂರ್ಣಸಮಾರಂಭವನ್ನು ಉದ್ದೇಸಿಸಿ ಮಾತನಾಡುತ್ತಿದ್ದರು.

ನಮ್ಮಹಿರಿಯರತ್ಯಾಗಹಾಗೂನಾನುಸೇವೆಯ ಮುಖಾಂತರ ನಿಮ್ಮಂತಹ ಸಹೃದಯಿಗಳ ಹೃದಯಾಂತರಾಳದಲ್ಲಿನೆಲೆಸಿದ್ದೇನೆಎಂದು ಹೇಳಿದ ದಯಾನಂದ ಪಾಟೀಲ ನಾವು ಸಾಕಷ್ಟು ಸ್ಥಿತಿವಂತರಾಗಿದ್ದರೂ ಬಡತನದ ಬೆಗೆಯಲ್ಲಿಯಲ್ಲಿ ಬದುಕು ಸಾಗಿಸುವ ಜನರನ್ನು ಕಂಡಾಗ ಅವರ ನೆರವಿಗೆ ಧಾವಿಸಿ ಸಾಧ್ಯವಾದಷ್ಟು ನೆರವಿನ ಹಸ್ತ ನೀಡುತ್ತೇನೆ ಇವತ್ತು ನಾನು ಜೀವನದಲ್ಲಿ ಎನನ್ನದರೂ ಸಾಧಿಸಿದ್ದರೆ ಅದು ನಮ್ಮ ಹಿರಿಯರ ಆದರ್ಶ ಹಾಗೂಮಾರ್ಗದರ್ಶನವೇಕಾರಣವಾಗಿದ್ದು ನನ್ನ 50ನೇ ಹುಟ್ಟು ಹಬ್ಬವನ್ನು ನಮ್ಮ ಧರ್ಮ ಹಾಗೂ ಸಂಸ್ಕೃತಿಯ ನೆಲೆಗಟ್ಟಿನಲ್ಲಿ ವೈಶಿಷ್ಟ್ಯಪೂರ್ಣವಾಗಿ ಆಯೋಜಿಸಿದ್ದ ನನ್ನ ಅಭಿಮಾನಿ ಮಿತ್ರರು ಹಾಗೂ ನನಗೆ ಶುಭಕೋರಲು ಆಗಮಿಸಿದ ಸರ್ವರಿಗೂ ನನ್ನ ಹೃದಯಾಂತರಾಳದ ಕೃತಜ್ಞತೆಗಳು ಎಂದು ಹೇಳಿದರು.

ಸಮಾರಂಭದ ಸಾನಿಧ್ಯವಹಿಸಿದ ಕೂಡಲಸಂಗಮದ ಮಹಾಸ್ವಾಮಿಗಳು ಮಾತನಾಡಿ ದಯಾನಂದ ಪಾಟೀಲ ಅವರು ತುಂಬಿದ ಕೊಡ ಇದ್ದಂತೆ , ರಾಜಕೀಯರಂಗದಲ್ಲಿವಿನಯತೆಎಂಬುದು ಗಗನಕುಸುಮವಾಗುತ್ತಿರುವ ಇಂದಿನ ದಿನಗಳಲ್ಲಿ ವಿನಯತೆ ಇಂದಿಗೂ ಸ್ವಲ್ಪಮಟ್ಟಿಗೆ ಉಳಿದಿದ್ದರೆ ಅದು ದಯಾನಂದ ಪಾಟೀಲ ಅವರಂತಹ ವ್ಯಕ್ತಿಗಳಲ್ಲಿ ಮಾತ್ರ ಎಂದು ಹೇಳಿ ಶುಭಕೋರಿದರು.

ದಯಾನಂದ ಪಾಟೀಲ ಅವರ ಹುಟ್ಟುಹಬ್ಬ ಸಮಾರಂಭವನ್ನು ಸಸಿಗೆ ನೀರು ಉಣಿಸುವ ಮೂಲಕ ಗಣ್ಯರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ದಯಾನಂದ ಪಾಟೀಲ ಅವರ ಅಜ್ಜ ದಿ. ಬಸಪ್ಪ ಹಾಗೂ ದಿ.ಸೀತಾಬಾಯಿ ತಿಮಸಾನಿ ಹಾಗೂ ತಂದೆ ದಿ.ಎಸ್ ಟಿ ಪಾಟೀಲ ಅವರ ಭಾವಚಿತ್ರಕ್ಕೆ ವಿಶೇಷ ಪೋಜೆ ಸಲ್ಲಿಸುವದರ ತಾಯಿ ಸುನಂದಾ ಪಾಟೀಲ ಅವರ ಪಾದಪೊಜೆಯ ಜೋತೆಗೆ ಸುಮಂಗಲೆಯರು ಆರತಿ ಬೆಳಗುವದರ ಮೂಲಕ ವೈಶಿಷ್ಟ್ಯಪೂರ್ಣವಾಗಿ ಹುಟ್ಟು ಹಬ್ಬವನ್ನು ಆಚರಿಸಲಾಯಿತು.

ಇದೇ ಸಂದರ್ಭದಲ್ಲಿ ಗಣನೀಯ ಸೇವೆಸಲ್ಲಿಸಿದ ಸಾಧಕರು ಹಾಗೂ ಗಣ್ಯರನ್ನು ದಯಾನಂದ ಪಾಟೀಲ ಅಭಿಮಾನಿ ಬಳಗದ ವತಿಯಿಂದಾ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಗಡಿನಾಡು ಅಕ್ಕಲಕೋಟೆಯ ಖ್ಯಾತ ಅಂಧ ಗಾಯಕ ರೇವಣಸಿದ್ದ ಫುಲಾರೆ ತಮ್ಮ ಅಪ್ರತಿಮ ಹಾಡುಗಾರಿಕೆ ಮುಖಾಂತರ ಸಂಗೀತ ಪ್ರೇಮಿಗಳಿಗೆ ರಸದೌತಣವನ್ನು ನೀಡಿದರು. ಶ್ರೀಬಸವಮೃತ್ಯುಂಜಯಮಹಾಸ್ವಾಮಿಗಳು ಕೂಡಲಸಂಗಮ,ಶ್ರೀ ನೀರುಪಾದೇಶ್ವರ ಮಹಾ ಸ್ವಾಮಿಗಳು ಮರೆಗುದ್ದಿ ಹಾಗೂ ಶ್ರೀ ಬಸವಲಿಂಗ ಮಹಾಸ್ವಾಮಿಗಳು ಗವಿಮಠ ಅವರಸಾನಿಧ್ಯದಲ್ಲಿನಡೆದಈಸಮಾರಂಭದ ಅಧ್ಯಕ್ಷತೆಯನ್ನುಡಾ.ಮೋಹನ್‌ಬಿರಾದಾರ್ ವಹಿಸಿದ್ದರು.

ಖ್ಯಾತ ನ್ಯಾಯವಾದಿ ಹಾಗೂ ಸಾಹಿತಿ ಪ್ರಕಾಶ ವಸ್ತ್ರದ ಸ್ವಾಗತ ಹಾಗೂ ಪ್ರಸ್ತಾವಿಕವಾಗಿ ಮಾತನಾಡಿದರೆ ರಾಘವೇಂದ್ರ ಪಾಟೀಲ ಕಾರ್ಯಕ್ರಮ ನಿರೂಪಿಸಿದರು.ವಿಠ್ಠಲ ತುಮ್ಮರಮಟ್ಟಿ ವಂದಿಸಿದರು. ಸುಧೀರ್ ಅರಳಿಕಟ್ಟಿವಂದಿಸಿದರು. ಈ ಸಂದರ್ಭದಲ್ಲಿ ರಾಮದುರ್ಗ ಶಾಸಕ ಅಶೋಕ ಪಟ್ಟಣ. ಬೈಲಹೊಂಗಲ್ ಶಾಸಕ ಮಹಾಂತೇಶ ಕೌಜಲಗಿ.ಸವದತ್ತಿ ಶಾಸಕ ವಿಶ್ವಾಸ ವೈದ್ಯ ಹಾಗೂ ಬೆಳಗಾವಿಯ ಹಿರಿಯ ನ್ಯಾಯವಾದಿ ರವಿರಾಜ್ ಪಾಟೀಲ್ ಅವರು ದಯಾನಂದ ಪಾಟೀಲ ಅವರ ಕುರಿತು ತಮ್ಮ ಮನದಾಳದ ಮಾತುಗಳನ್ನು ವ್ಯಕ್ತಪಡಿಸಿದರು.

# ನೈರ್ಮಲ್ಯವನ್ನು ಪಾಲಿಸುವಲ್ಲಿ ವಿದ್ಯಾರ್ಥಿಗಳ ಪಾತ್ರ ಬಹುಮುಖ್ಯ: ಶಿಫಾ ಜಮಾದಾರ



**ವಿಜಯಪುರ :** ನೈರ್ಮಲ್ಯವನ್ನು ಪಾಲಿಸುವಲ್ಲಿ ವಿದ್ಯಾರ್ಥಿಗಳು ಬಹುಮುಖ್ಯವಾದ ಪಾತ್ರವನ್ನು ವಹಿಸುತ್ತಾರೆ. ಸ್ವಚ್ಛತೆ-ಯ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳುವುದು ಮತ್ತು ನೈರ್ಮಲ್ಯದ ವಾತಾವರಣವನ್ನು ನಿರ್ಮಿಸುವಲ್ಲಿ ಶಾಲಾ-ಕಾಲೇಜುಗಳ ಪಾತ್ರ ಮುಖ್ಯವಾಗಿದೆ ಎಂದು ಲಾಡಲಿ ಫೌಂಡೇಶನ ಟ್ರಸ್ಟ್ ದ ಸ್ವಚ್ಛತಾ ರಾಯಭಾರಿ ಶಿಫಾ ಜಮಾದಾರ ಅಭಿಪ್ರಾಯಪಟ್ಟರು.

ಬುಧವಾರ ನಗರದ ಅಫಜಲಪೂರ ಟಕ್ಕೆಯಲ್ಲಿ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ-49 ರಲ್ಲಿ ಲಾಡಲಿ ಫೌಂಡೇಶನ ಟ್ರಸ್ಟ್ ನವದೆಹಲಿ ಹಾಗೂ ವಿಜಯಪುರ ಜಿಲ್ಲಾಡಳಿತ ಇವರ ಸಹಯೋಗದಲ್ಲಿ ಜರುಗಿದ ಶಾಲೆಯ ಮಕ್ಕಳಲ್ಲಿ ಸ್ವಚ್ಛತೆಯ ಅರಿವು ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ವಿದ್ಯಾರ್ಥಿಗಳು ನೈರ್ಮಲ್ಯ ಮತ್ತು ನೈರ್ಮಲ್ಯದ ಮೂಲ ಅರ್ಥವನ್ನು ಮಾಡಿಕೊಳ್ಳಬೇಕು. ಶೌಚಾಲಯಗಳನ್ನು ನೈರ್ಮಲ್ಯವಾಗಿ ಬಳಸಬೇಕು. ವಾಶರೂಮ್ ಗಳನ್ನು ಬಳಸಿದ ನಂತರ ಅದರ ಸ್ವಚ್ಚ ಪರಿಸರವನ್ನು ಕಾಪಾಡಿಕೊಳ್ಳಬೇಕು. ಮಕ್ಕಳಿಗೆ ಸ್ವಚ್ಛತೆಯ ಅಂಶದ ಬಗ್ಗೆ ಅರಿವು ಮೂಡಿಸಬೇಕು. ನಿಯಮಿತವಾಗಿ ಕೈ ತೊಳೆಯುವದು, ಸ್ವಚ್ಚವಾಗಿರುವುದು, ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಚಗೊಳಿಸುವುದು ಮುಂತಾದ ಮೂಲಭೂತ ವಿಷಯಗಳನ್ನು ತಿಳಿಸಬೇಕಾಗಿದೆ ಎಂದರು.

ಲಾಡಲಿ ಫೌಂಡೇಶನ್ ಟ್ರಸ್ಟ್ ನವದೆಹಲಿಯ ಯೋಜನಾ ನಿರ್ದೇಶಕಿ ಸೂರಬಿ ಸಿಂಗ್ ಮಾತನಾಡಿ, ಶಿಕ್ಷಕರು ಮತ್ತು ಪೊ?ಷಕರು ನೈರ್ಮಲ್ಯ ಕಾಪಾಡುವಲ್ಲಿ ಮುಖ್ಯವಾದ ಪಾತ್ರವನ್ನು ವಹಿಸಿದ್ದಾರೆ. ಅವರು ಮಕ್ಕಳಲ್ಲಿ ಸ್ವಚ್ಛತೆ-ಯ ಭಾವನೆಯನ್ನು ಬೆಳೆಸಬೇಕು. ಮತ್ತು ನೈರ್ಮಲ್ಯವನ್ನು ಪೊ?ರೀತ್ಸಾಹಿಸಬೇಕು. ಅದೇ ರೀತಿಯಲ್ಲಿ ವಿದ್ಯಾರ್ಥಿಗಳು ತಮ್ಮ ಶಾಲೆ, ಮನೆಗಳು ಹೇಗೆ ಸ್ವಚ್ಚಗೊಳಿಸಬೇಕು, ಹೇಗೆ ಶುಚಿತ್ವವನ್ನು ಕಾಪಾಡಿಕೊಳ್ಳಬೇಕು ಎಂದು ತಿಳಿದಿರಬೇಕು ಎಂದರು.

ಕಾರ್ಯಕ್ರಮದಲ್ಲಿ ಸುಮಾರು 200 ವಿದ್ಯಾರ್ಥಿಗಳಿಗೆ ಆಟದ ಜೊತೆಗೆ ಸ್ವಚ್ಚತೆಯ ಅರಿವು ಮತ್ತು ಆಹಾರ ಪದಾರ್ಥ ಪ್ಯಾಕೇಜ್, ಜೂಸ್ ಪ್ಯಾ-ಕೇಜ್ ನೀಡಿ ಅದನ್ನು ಬಳಸಿದ ನಂತರ ವಿದ್ಯಾರ್ಥಿಗಳು ಯಾವ ರೀತಿ ತಾಜ್ಯ ವಿಲೇವಾರಿ ಮಾಡಬೇಕು ಮತ್ತು ಕೈ ತೊಳೆದುಕೊಳ್ಳಬೇಕೆಂದು ತರಬೇತಿ ನೀಡಲಾಯಿತು.

ಶಾಲಾ ಮುಖ್ಯಾಧ್ಯಾಪಕ ಚಂದ್ರಕಾಂತ ಕನಸೆ, ಶಿಕ್ಷಕರಾದ ಶಿವಾನಂದ ರೂಗಿ, ಮಲ್ಲಪ್ಪ ಸ್ವಾಮಿ, ನೀಲಮ್ಮ ಹಳ್ಳೂರ, ರುಕ್ಸಾನಾ ಮನಿಯಾರ, ಸವಿತಾ ಜಿಗರಿ, ಲಾಡಲಿ ಫೌಂಡೇಶನ್ ದ ಕಾರ್ಯಕ್ರಮ ಸಮನ್ವಯಾಧಿಕಾರಿ ಸರಿತಾ ಚಕ್ರಸಾಲಿ, ಪ್ರೀತಿ, ಶೇಖರ ಪೊಲು ಉಪಸ್ಥಿತರಿದ್ದರು.

# ಕರಾಟೆ ಪಟುಗಳ ಅಮೋಘ ಸಾಧನೆ




**ವಿಜಯಪುರ :** ಜು.6,7ರಂದು ಗದಗ ನಗರದ ಕನಕ ಭವನದಲ್ಲಿ ಗೋಲ್ಡನ್ ಕರಾಟೆ ಸ್ಪೋರ್ಟ್ಸ್ ಅಸೋಶಿಯೇಶನ್ ವತಿಯಿಂದ ಹಮ್ಮಿಕೊಂಡಿದ್ದ ರಾಷ್ಟ್ರೀಯ ಮುಕ್ತ ಕರಾಟೆ ಸ್ಪರ್ಧೆಯಲ್ಲಿ ವಿಜಯಪುರ ಕರಾಟೆ ಪಟುಗಳು ಅಮೋಘ ಸಾಧನೆ ಮಾಡಿದ್ದಾರೆ.

ಕಟಾ ವಿಭಾಗದಲ್ಲಿ ವಿಶಾಲ ಝುಳಕಿ, ಚಿರಂಜೀವಿ ಮಠಪತಿ, ಪ್ರಥಮ ಸ್ಥಾನ, ಶ್ರೇಯಾ ಘನವಟೆ, ಉತ್ಕರ್ಷ ರಾಜ್ ದ್ವಿತೀಯ ಸ್ಥಾನ, ಯುವರಾಜ ಚವ್ಹಾಣ, ಸುದರ್ಶನ ನಾಯ್ಕ, ಅಮನ್ ನಾಯ್ಕ, ಪ್ರಜ್ವಲ ಕತ್ರಾಳ, ಶ್ರೇಯಸ ಘನವಟೆ, ಶ್ರೀರಕ್ಷಾ ಹಡಪದ, ಸಂಸ್ಕೃತಿ ಪತ್ತಾರ, ನಿಶಾಕೌಸರ ಟಕ್ಕಳಕಿ ಹಾಗೂ ಮುರುಗೇಶ ಕೊಪ್ಪದ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ.

ಫೈಟ್ ವಿಭಾಗದಲ್ಲಿ ಚಿರಂಜೀವಿ ಮಠಪತಿ ಪ್ರಥಮ ಸ್ಥಾನ, ಅಮನ್ ನಾಯ್ಕ, ಶ್ರೇಯಾ ಘನವಟೆ, ಶ್ರೇಯಸ ಘನವಟೆ, ಪ್ರಜ್ವಲ ಕತ್ರಾಳ ಹಾಗೂ ಯುವರಾಜ ಚವ್ಹಾಣ ದ್ವಿತೀಯ ಸ್ಥಾನ, ಸಂಸ್ಕೃತಿ ಪತ್ತಾರ, ನಿಶಾಕೌಸರ ಟಕ್ಕಳಕಿ ತೃತೀಯ ಸ್ಥಾನ ಪಡೆಯುವ ಮೂಲಕ ರಾಜ್ಯ ಹಾಗೂ ಜಿಲ್ಲೆಗೆ ಕೀರ್ತಿ ತಂದಿದ್ದಾರೆ, ಕರಾಟೆ ಪಟುಗಳ ಸಾಧನೆಗೆ ತರಬೇತುದಾರರಾದ ಅಕ್ಷಯ ಹಿರೇಮಠ, ಕಾರ್ಯದರ್ಶಿ ಪ್ರೇಮಾನಂದ ನಾಗ-ರೇಶಿ, ಪೋಷಕರು ಹರ್ಷ ವ್ಯಕ್ತಪಡಿಸಿ ಅಭಿನಂದನೆ ಸಲ್ಲಿಸಿದ್ದಾರೆ.

# ಬರ ಪರಿಸ್ಥಿತಿಯಲ್ಲಿ ಬೆಳೆ ನಿರ್ವಹಣೆ ಕುರಿತು ರೈತರಿಗೆ ತರಬೇತಿ





**ಕೊಪ್ಪಳ :** ತಾತ್ಕಾಲಿಕ ಬರ ಪರಿಸ್ಥಿತಿಯಲ್ಲಿ ಮಳೆಯಾಶ್ರಿತ ವಿವಿಧ ಬೆಳೆಗಳಾದ ಮೆಕ್ಕೆ ಜೋಳ, ಹೆಸರು, ಸಜ್ಜೆ, ಅಲಸಂದಿ ಅಲ್ಲದೇ ನವಣೆಯಂತಹ ಸಿರಿಧಾನ್ಯಗಳ ನಿರ್ವಹಣೆ ಕುರಿತು ಕೊಪ್ಪಳ ತಾಲ್ಲೂಕಿನ ಕಲಕೇರಿ ಗ್ರಾಮದಲ್ಲಿ ಜುಲೈ 10 ರಂದು ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಕೊಪ್ಪಳ ಹಾಗೂ ಕೋರಮಂಡಲ ಇಂಟರನ್ಯಾಶನಲ್ ಲಿಮಿಟೆ-ಡ್ ಕಂಪನಿ ಸಹಯೋಗದಲ್ಲಿ ರೈತರಿಗೆ ಒಂದು ದಿನದ ತರಬೇತಿ ಹಾಗೂ ರೈತರೊಡನೆ ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಜಿಲ್ಲೆಯಲ್ಲಿ ಆರಂಭದಲ್ಲಿಅತ್ಯಂತಆಶಾದಾಯಿಕ ವಾಗಿದ್ದ ಮುಂಗಾರುಮಳೆ ಈಗ ಕ್ಷೀಣವಾಗಿದ್ದುಜಮೀನಿನಲ್ಲಿರೈತರು ಬಿತ್ತಿದ ವಿವಿಧ ಬೆಳೆಗಳು ತೀವ್ರ ಅಜೈವಿಕ ಒತ್ತಡಕ್ಕೆ ಒಳಗಾಗಿದ್ದು, ರೈತರು ಆತಂಕದಲ್ಲಿರುವ ಕಾರಣ ಕೊಪ್ಪಳ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದಿಂದ ರೈತರಿಗೆ ಬೆಳೆ ನಿರ್ವಹಣೆ ಕುರಿತು ಸಲಹೆಗಳನ್ನು ನೀಡಲಾಯಿತು.

ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ಸಹ ಪ್ರಾಧ್ಯಾಪಕರಾದ ವಾಮನಮೂರ್ತಿ ಅವರು ಮಾತನಾಡಿ, ಬೆಳೆಗಳಿಗೆ ಕೀಟ ರೋಗಗಳ ಬಾಧೆ ಸಾಮಾನ್ಯ. ಆದರೆ ವಾತಾವರಣದಲ್ಲಿನ ಬದಲಾವಣೆಯಿಂದಾಗಿ ಬೆಳೆಗಳು ಮನುಷ್ಯರಂತೆ ಒತ್ತಡಕ್ಕೊಳಗಾ ಗುತ್ತವೆ. ಅತೀವೃಷ್ಠಿ ಅನಾವೃಷ್ಠಿ, ದೀರ್ಘಕಾಲದ ಬರ, ತಾತ್ಕಾಲಿಕ ಬರ ಅಲ್ಲದೇ ತೀವ್ರವಾದ ಚಳಿ, ಶುಷ್ಕಗಾಳಿ ಇತ್ಯಾದಿ ಬೆಳೆಗಳ ಮೇಲೆ ದುಷ್ಪರಿಣಾಮ ಬೀರುತ್ತವೆ. ನಾನು ನೋಡಿದಂತೆ ಬೇಗ ಮುಂಗಾರು ಮಳೆ ಆದಾಗ ರೈತರು ಬಿತ್ತನೆ ಮಾಡುತ್ತಾರೆ.ಅದರಲ್ಲೂಹೆಸರುಈ ಭಾಗದ ನಗದು ಬೆಳೆ (ಕ್ಯಾಶಕ್ರಾಪ್) ಆಗಿದ್ದು, ಈ ಬಾರಿ ಸುಮಾರು 20 ಸಾವಿರ ಹೆಕ್ಟೇರ್‌ನಷ್ಟು ಹೆಸರು ಬೆಳೆ ಬಿತ್ತನೆಯಾಗಿದೆ. ಆದರೆ ತೀವ್ರ ವರ್ಷಧಾರೆ ಕೊರತೆಯಿಂದಾಗಿ ಬೆಳೆಗಳು ಒಣಗುತ್ತಿವೆ. ಅದರಲ್ಲೂ ಹೂ ಬಿಡದ ಹಂತದಲ್ಲಿನ ಬೆಳೆಗಳಿಗೀಗ ತೀವ್ರ ಮಳೆಯ ಅವಶ್ಯಕತೆ ಇದೆ. ಇಂತಹ ಪರಿಸ್ಥಿತಿಯಲ್ಲಿ ರೈತರು ಕೆಲವು ನೀರಿನಲ್ಲಿಕರಗುವಗೊಬ್ಬರಗಳಾದ ನ್ಯಾನೋಯುರಿಯಾ, ಡಿಎಪಿ ಜೊತೆಗೆ ಕೆಲವು ಸಸ್ಯಚೋದಕ ಬಳಸುವ ಮೂಲಕ ಮತ್ತು ಜೈವಿಕ ಗೊಬ್ಬರಗಳನ್ನು ಸಿಂಪರಣೆ ಮಾಡುವುದರ ಮೂಲಕ 8-10 ದಿನ ಒತ್ತಡ ಸಹಿಷ್ಣುತೆ ಪರಿಸ್ಥಿತಿಯನ್ನು ಬೆಳೆಗಳಿಗೆ ಒದಗಿಸಲು ಸಾಧ್ಯ. ಪ್ರತಿಯೊಬ್ಬ ರೈತರು ಕೃಷಿ ಹೊಂಡದಂತಹ ನೀರು ಸಂಗ್ರಹಣಾ ತೊಟ್ಟಿಗಳನ್ನು ನಿರ್ಮಿಸಿಕೊಂಡು ನೀರಿನ ಲಭ್ಯತೆ ಇರುವಂತೆ ನಿಗಾ ವಹಿಸಬೇಕು. ಬೆಳೆಗಳಿಗೆ ಅವಶ್ಯಕತೆಗಿಂತ ಹೆಚ್ಚಿನ ನೀರು ಕೊಡದೇ ನೀರಿನ ಬಜೆಟ್ ಅನುಸರಿಸಬೇಕು ಎಂದು ತಿಳಿಸಿದರು. ಬೆಳೆಗಳಿಗೆ ಶಿಫಾರಸು ಮಾಡಿದ ಪ್ರಮಾಣದಲ್ಲೇ ಗೊಬ್ಬರಗಳನ್ನು ಬಳಸಬೇಕಲ್ಲದೇ ಪೋಟ್ಯಾಶ್‌ಯುಕ್ತ ಸಂಯುಕ್ತ ಗೊಬ್ಬರಗಳನ್ನುಬಳಸುವುದರಿಂದ ಪೋಟ್ಯಾಶ್ ಬೆಳೆಗಳಿಗೆ ಲಭ್ಯವಾಗಿ ಬರ ನಿರೋಧಕ ಶಕ್ತಿ ಬರುತ್ತದೆ. ಗೊಬ್ಬರಗಳನ್ನು ಶಿಫಾರಸಿನಂತೆ ವಿವಿಧ ಹಂತಗಳಲ್ಲಿ 2-3 ಬಾರಿ ಹಂತ, ಹಂತವಾಗಿ ಕೊಡಬೇಕು. ರೋಗ/ಕೀಟಗಳಸೂಕ್ತನಿರ್ವಹಣೆ ಮಾಡಬೇಕು. ಮಿಶ್ರಬೆಳೆ ಬೆಳೆದಾಗ ತೇವಾಂಶ, ಕೊರತೆ ಒತ್ತಡ ಕಡಿಮೆ ಮಾಡಬಹುದಾಗಿದೆ ಎಂದು ಸಮಗ್ರ ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ರೈತರು ಮುಂಗಾರು ಬೆಳೆ ಸಮೀಕ್ಷೆ ತಾವೇ ಮಾಡಿಕೊಳ್ಳಬೇಕು ಮತ್ತು ತಪ್ಪದೇ ಬೆಳೆ ವಿಮೆ ಮಾಡಿಸಬೇಕು, ಇದರ ಬಗ್ಗೆ ಕೃಷಿಅಧಿಕಾರಿಗಳಿಂದ ಸಮಗ್ರ ಮಾಹಿತಿ ಪಡೆದುಕೊಳ್ಳಬೇಕೆಂದು ಕರೆ ನೀಡಿದರು. ಕೋರಮಂಡಲ ಕಂಪನಿಯ ಕ್ಷೇತ್ರ ಅಧಿಕಾರಿ ಶ್ರೀನಿವಾಸ ಅವರು ಮಾತನಾಡಿ, ತಮ್ಮ ಕಂಪನಿಯ ಉತ್ಪನ್ನಗಳಾದ ನ್ಯಾನೋ, ಡಿ.ಎ.ಪಿ., ಗ್ರೀನಸ್ಟಾರ್ ಎನ್ನುವ ಸಸ್ಯಚೋದಕ ಅಲ್ಲದೇ ಪ್ಯಾರಂಫಾಸ್ ನಂತಹ ವಿಶಿಷ್ಟ ಉತ್ಪನ್ನಗಳ ಮಾಹಿತಿ ಹಾಗೂ ಬೆಳೆಗ ಳಲ್ಲಿ ಬಳಸುವ ನ್ಯಾನೋ ಡಿ.ಎ.ಪಿ ಕುರಿತು ಮಾಹಿತಿ ನೀಡಿ-ದರು. ಕಾರ್ಯಕ್ರಮದಲ್ಲಿ ಕಲಕೇರಿ ಗ್ರಾಮದ 40 ಕ್ಕೂ ಹೆಚ್ಚಿನ ರೈತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಉಪಯುಕ್ತ ಮಾಹಿತಿ ಪಡೆದರು. ಹೆಚ್ಚಿನ ಮಾಹಿತಿಗಾಗಿ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರಕ್ಕೆ ಭೇಟಿ ನೀಡಬಹುದು ಅಥವಾ ವಿಸ್ತರಣಾ ಮುಂದಾಳು ಡಾ.ಎಂ.ವಿ.ರವಿ( ಮೊ. ನಂ. 9480247745) ಅವರನ್ನು ಸಂಪರ್ಕಿಸಬಹುದು ಎಂದು ಕಾರ್ಯಕ್ರಮದಲ್ಲಿ ತಿಳಿಸಲಾಯಿತು.

# ಲಾಯಿನ್ಸ್ ಹಿರಿಯ ನಾಗರಿಕರ ವೇದಿಕೆ ಅಧ್ಯಕ್ಷರಾಗಿ ಡಾ. ಜಿ.ಡಿ. ಕೊಟ್ನಾಳ ಪದಗ್ರಹಣ



**ವಿಜಯಪುರ :** ವಿಜಯಪುರ ಲಾಯಿನ್ಸ್ ಹಿರಿಯ ನಾಗರಿಕರ ವೇದಿಕೆ ನೂತನ ಅಧ್ಯಕ್ಷರಾಗಿ ಡಾ. ಜಿ.ಡಿ. ಕೊಟ್ನಾಳ ಅವರು ಅಧಿಕಾರ ಸ್ವೀಕರಿಸಿದರು.

ಇದೇ ವೇಳೆ ಉಪಾಧ್ಯಕ್ಷರಾಗಿ ಎಸ್.ವಾಯ್. ನಡುವಿನಮನಿ ಹಾಗೂ ಕಾರ್ಯದರ್ಶಿಯಾಗಿ ಎಸ್.ವಾಯ್. ವಾಲಿಕಾರ ಅವರು ಪದಗ್ರಹಣ ಮಾಡಿದರು.

ನೂತನ ಅಧ್ಯಕ್ಷ ಡಾ. ಜಿ.ಡಿ. ಕೊಟ್ನಾಳ ಅವರು ಮಾತನಾಡಿ, ಈ ಹಿಂದಿನಂತೆ ನಡೆದು ಬಂದ ಕಾರ್ಯಕ್ರಮಗಳನ್ನು ಮುಂದುವರೆಸಿಕೊಂಡು ಹೋಗಲು ಎಲ್ಲರ ಸಹಕಾರ ಬೇಕು ಎಂದು ಮನವಿ ಮಾಡಿಕೊಂಡರು.

ಈ ಸಂದರ್ಭದಲ್ಲಿ ಕೆ.ಎಸ್. ಪಾಟೀಲ, ಎ.ಎಸ್. ಕೋರಿ, ಎಸ್.ಎಸ್. ಅನಂತಪೂರ, ಎಸ್.ಎಂ. ಇನಾಮದಾರ, ಎನ್.ಆರ್. ಕುಲಕರ್ಣಿ, ಎಸ್. ಎಂ. ಕಣಬೂರ, ವಿ.ಎಸ್. ಸಾವಳಗಿಮಠ, ಬಿ.ಜಿ. ಹಳಗುಣಕಿ, ಎಸ್.ಬಿ. ಭುಯ್ಯಾರ, ಎಚ್.ಎ. ಕಿಣಗಿ, ಎಸ್.ಆರ್. ಮಾನಕರ, ಎಸ್.ಎಸ್. ಬಣಜಿಗೇರ, ಜಿ.ಎಸ್. ಕುಲಕರ್ಣಿ, ಎ.ವಿ. ಹೊಸೂರ, ಎಸ್.ಎಸ್. ಸಿಂಧೂರ, ವಿ.ಎಸ್. ಹಂದಿಗೋಳ, ಎನ್.ಎಸ್. ಸಜ್ಜನ, ಹುಣಸಿಗಿಡದ, ಬಿ.ಪಿ. ಸಿಂಧೆ, ಆರ್.ಜಿ. ಕೊಟ್ನಾಳ, ಆರ್.ಆರ್. ಮದರಳ್ಳಿ, ಬಿ.ಎಸ್. ಪಾಟೀಲ ಉಪಸ್ಥಿತರಿದ್ದರು.

ನ್ಯಾಯವಾದಿ ಮೊಹಮ್ಮದಗೌಸ ಹವಾಲ್ದಾರ ಅವರು ಬಸವಾದಿ ಶರಣರ ಬಗ್ಗೆ ಉಪನ್ಯಾಸ ನೀಡಿ-ದರು.

# ಡೆಂಗ್ಯೂ ಖಾಯಿಲೆ ನಿಯಂತ್ರಣ: ಬೆಂಕಿನಗರ ಸರ್ಕಾರಿ ಪ್ರೌಢ ಶಾಲೆಯಲ್ಲಿ ಅರಿವು



**ಕೊಪ್ಪಳ :** ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳ ಕಚೇರಿ, ಕೊಪ್ಪಳ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಬೆಂಕಿನಗರದ ಸರ್ಕಾರಿ ಪ್ರೌಢ ಶಾಲೆಯ ಸಂಯುಕ್ತಾಶ್ರಯದಲ್ಲಿ ಇತ್ತೀಚೆಗೆ ಡೆಂಗ್ಯೂ ಖಾಯಿಲೆ ನಿಯಂತ್ರಣದ ಕುರಿತು ಶಾಲೆಯ ಆವರಣದಲ್ಲಿ ಅರಿವು ಕಾರ್ಯಕ್ರಮ ನಡೆಯಿತು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಶಿವಾನಂದ ಪ್ಹಿ.ಪಿ ಅವರು ಮಾತನಾಡಿ, ಸಮುದಾಯದೊಂದಿಗೆ ಸೇರಿ, ಡೆ-ಂಗ್ಯೂ ಜ್ವರವನ್ನು ನಿಯಂತ್ರಿಸೋಣ ಎಂಬ ಘೋಷವಾಕ್ಯದೊಂದಿಗೆ ಡೆಂಗ್ಯೂ ಖಾಯಿಲೆ ನಿಯಂತ್ರಣ ಕಾರ್ಯಕ್ರಮದ ಬಗ್ಗೆ ಜಾಗೃತಿ ಮೂಡಿಸಲಾಗುತ್ತದೆ. ಮಳೆಗಾಲ ಪ್ರಾರಂಭವಾದ ಕಾರಣ ಶುದ್ಧ ನೀರಿನಲ್ಲಿ ಸೋಂಕಿತ ಈಡಿಸ್ ಜಾತಿಯ ಸೊಳ್ಳೆಗಳು ಮೊಟ್ಟೆಗಳನ್ನಿಟ್ಟು ಸಂತಾನಾಭಿವೃದ್ಧಿ ಮಾಡುತ್ತವೆ.

ನಂತರ ಮನುಷ್ಯರಿಗೆ ಕಚ್ಚುವುದರಿಂದ ಈ ಖಾಯಿಲೆ ಹರಡುತ್ತದೆ. ತಲೆನೋವು, ವಾಂತಿ, ಕಣ್ಣಿನ ಹಿಂಭಾಗದಲ್ಲಿ ನೋವು, ಮೈಮೇಲೆ ಬಿಲ್ಲೆ ಹಾಕಾರದ ಕೆಮ್ಪು ಗಂಧೆಗಳು, ಕಪ್ಪು ಮಲವಿಸರ್ಜನೆ, ವಸಡುಗಳಲ್ಲಿ ರಕ್ತಸ್ರಾವ ಇಂತಹ ಲಕ್ಷಣಗಳಿದ್ದರೆ ಸಮೀಪದ ಸರ್ಕಾರಿ ಆಸ್ಪತ್ರೆಗೆ ಭೇಟಿನೀಡಿ, ರಕ್ತ ಪರೀಕ್ಷೆ ಮಾಡಿಸಿ, ಖಚಿತ ಪಟ್ಟರೆ ಚಿಕಿತ್ಸೆ ಪಡೆದುಕೊಳ್ಳಬೇಕು.

ಯಾವುದೇ ಕಾರಣಕ್ಕೂ ಜ್ವರದ ಬಗ್ಗೆ ನಿರ್ಲಕ್ಷತನ ಮಾಡಬಾರದು. ಶಾಲೆಗಳಲ್ಲಿ, ಮನೆಗಳಲ್ಲಿ, ನೀರು ಶೇಖರಿಸುವ ಡ್ರಮ್, ಬ್ಯಾರಲ್, ಸಿಮೆಂಟ್ ತೊಟ್ಟೆ, ಕಲ್ಲಿನದೋಣಿ ಇನ್ನಿತರ ನೀರು ಸಂಗ್ರಹ ಪರಿಕರಗಳನ್ನು ವಾರದಲ್ಲಿ 2 ಬಾರಿ ಸ್ವಚ್ಚವಾಗಿ ತೊಳೆದು. ಸುಣ್ಣಹಚ್ಚಿ ಒಣಗಿಸಿ ಪುನಃ ನೀರು ತುಂಬಬೇಕು. ನೀರಿನ ಸಲಕರಣೆಗಳಿಗೆ ಭದ್ರವಾಗಿ ಮುಚ್ಚಳದಿಂದ ಮುಚ್ಚಬೇಕು, ಸಾಯಂಕಾಲ ವೇಳೆ ಮನೆಯ ಮುಂದೆ ಬೇವಿನ ಸೊಪ್ಪಿನ ಹೊಗೆ ಹಾಕಬೇಕು. ಸೊಳ್ಳೆ ಕಡಿತದಿಂದ ದೂರವಿರಲು ವೈಯಕ್ತಿಕ ರಕ್ಷಣೆ ಮಾಡಿಕೊಳ್ಳಬೇಕು. ಮನೆಯ ಸುತ್ತಾ-ಮುತ್ತಾ ತ್ಯಾಜ್ಯ ವಸ್ತುಗಳಾದ ಟೈರ್, ಒರಳುಕಲ್ಲು, ತೆಗ್ಗಿನಚಿಪ್ಪು, ಹೊಡೆದ ಪ್ಲಾಸ್ಟಿಕ್ ಬಕೆಟ್ ಇತ್ಯಾದಿಗಳನ್ನು ಮನೆಯ ಮೇಲೆ ಮತ್ತು ಅಕ್ಕ-ಪಕ್ಕದಲ್ಲಿ ಬಿಸಾಡಬಾರದು. ಈ ಬಗ್ಗೆ ಶಾಲಾ ವಿದ್ಯಾರ್ಥಿಗಳು ನಿಮ್ಮ ಪಾಲಕರಿಗೆ ತಿಳಿ ಹೇಳಬೇಕು. "ಪ್ರತಿ ಶುಕ್ರವಾರ ಡೆಂಗಿ ನಿಯಂತ್ರಣ ಅಭಿಯಾನ" ಸಮುದಾಯದೊಂದಿಗೆ ಆಚರಿಸಲಾಗುವುದು ಎಂದು ಹೇಳಿದರು.

ಎಸ್.ಟಿ.ಎಸ್ ಇಬ್ರಾಹಿಂಸಾಬ್ ಅವರು ಕ್ಷಯರೋಗ ನಿರ್ಮೂಲನೆ ಕುರಿತು ವಿವರವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರಾದ ಸೋಮರೆಡ್ಡಿ ಡಂಬ್ರಳ್ಳಿ, ಶಿಕ್ಷಕರಾದ ವೀರಯ್ಯ, ಶೇಖರಪ್ಪ, ಇತರೆ ಶಿಕ್ಷಕರು, ಆಶಾ ಕಾರ್ಯಾಕರ್ತೆಯರು, ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಬ್ರ್ಯಾಂಡ್ ಕೊಪ್ಪಳ ಯೋಜನೆ: ಜಿಲ್ಲೆಯ ಪ್ರವಾಸಿ ತಾಣಗಳ ಮಾಹಿತಿ ಸಲ್ಲಿಸಲು ಮನವಿ

**ಕೊಪ್ಪಳ :** ಬ್ರ್ಯಾಂಡ್ ಕೊಪ್ಪಳ ಯೋಜನೆಯಡಿ ಕೊಪ್ಪಳ ಜಿಲ್ಲೆಯ ವಿವಿಧ ಐತಿಹಾಸಿಕ ತಾಣಗಳ ಹಾಗೂ ಸ್ಮಾರಕಗಳು ಸೇರಿದಂತೆ ಪ್ರವಾಸೋದ್ಯಮಗಳ ಮಾಹಿತಿ ಸಲ್ಲಿಸುವಂತೆ ಕೊಪ್ಪಳ ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಬ್ರ್ಯಾಂಡ್ ಕೊಪ್ಪಳ ಯೋಜನೆಯಡಿ ಕೊಪ್ಪಳ ಜಿಲ್ಲೆಯ ಪ್ರವಾಸೋದ್ಯಮವನ್ನು ರಾಷ್ಟ್ರೀಯ ಮಟ್ಟದಲ್ಲಿ ಅಭಿವೃದ್ದಿಪಡಿಸಲು ಬ್ರ್ಯಾಂಡ್ ಕೊಪ್ಪಳ ಲೋಗೋವನ್ನು 2024ರ ಕನಕಗಿರಿ ಉತ್ಸವದಲ್ಲಿ ಮುಖ್ಯಮಂತ್ರಿಗಳು ಬಿಡುಗಡೆ ಮಾಡಿರುತ್ತಾರೆ. ಈ ಯೋಜನೆಯಡಿ ಕೊಪ್ಪಳ ಜಿಲ್ಲೆಯ ವಿವಿಧ ಐತಿಹಾಸಿಕ ತಾಣಗಳ ಹಾಗೂ ಸ್ಮಾರಕಗಳ ಕುರಿತು ಸಾರ್ವಜನಿಕರಿಗೆ ಪ್ರಚಾರ ಪಡಿಸಲು ಹಾಗೂ ಸುಸ್ಥಿರ ಅಭಿವೃದ್ಧಿಗಾಗಿ, ಪ್ರವಾಸಿ ತಾಣಗಳ ಪರಂಪರೆ ಉಳಿವಿಗಾಗಿ ಜಿಲ್ಲೆಯ ಪ್ರವಾಸೋದ್ಯಮದಲ್ಲಿ ಮಾಹಿತಿಯುಳ್ಳ ತಜ್ಞರು, ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಆಸಕ್ತಿಯುಳ್ಳ ಸಾರ್ವಜನಿಕರು ಕೊಪ್ಪಳ ಜಿಲ್ಲೆಯ ಪ್ರವಾಸಿ ತಾಣಗಳಾದ ಶ್ರೀ ಗವಿಮಠ, ಕೊಪ್ಪಳ ಕೋಟೆ, ಹುಲಿಕೆರೆ, ಶ್ರೀ ಮಳೆಮಲ್ಲೇಶ್ವರ ದೇವಸ್ಥಾನ, ಭಾಗ್ಯನಗರ ಸೀರೆ ಮತ್ತು ಕೈಮಗ್ಗ, ಬಹದ್ದೂರಬಂಡೆ ಕೋಟೆ, ಕಿನ್ನಾಳ ಕಲೆ, ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನ, ಪಂಪಾವನ ಮುನಿರಬಾದ, ಶ್ರೀ ಆಂಜನೇಯಸ್ವಾಮಿ ದೇವಸ್ಥಾನ ಅಂಜನಾದ್ರಿ ಬೆಟ್ಟ, ವಾಲಿ-ಕಿಲ್ಲಾ ಕೋಟೆ, ಶ್ರೀ ಆದಿಶಕ್ತಿ ದುರ್ಗಾದೇವಿ ದೇವಸ್ಥಾನ, ನವವೃಂದಾವನ, ಪಂಪಾ ಸರೋವರ, ಚಿಂತಾಮಣಿಮಠ (ಚಿಂತಾಮಣಿ ಆಶ್ರಮ), ಗಗನ್ ಮಹಲ್, ಬಾಳೆ ನಾರಿನ ಕರಕುಶಲ ಹಾಗೂ ಕೈಮಗ್ಗ ಆನೆಗುಂದಿ, ಗವಿವರ್ಣ ಚಿತ್ರಗಳು, ಆನೆಗುಂದಿ ಭಾಗ, ಸಾಣಾಪುರ ಕೆರೆ, ಶ್ರೀ ಕನಕಾಚಲಪತಿ ದೇವಸ್ಥಾನ, ವೆಂಕಟಪ್ಪನ ಬಾವಿ ಕನಕಗಿರಿ, ಶ್ರೀ ಮಹಾದೇವ ದೇವಸ್ಥಾನ, ಇಟಗಿ, ಶ್ರೀ ಮಹಾಮಾಯಾ ದೇವಸ್ಥಾನ ಕುಕನೂರ, ಕುಮಾರರಾಮ ಕೋಟೆ ಜಬ್ಬಲಗುಡ್ಡ, ಹಿರೇಬೆಣಕಲ್ ಮೋರೆರ್ ಮನೆಗಳು, ಶ್ರೀ ಸೋಮೇಶ್ವರ ದೇವಸ್ಥಾನ ಪುರ, ಕಪಿಲತೀರ್ಥ ಜಲಪಾತ ಕಬ್ಬರಗಿ, ಶ್ರೀ ಲಕ್ಷ್ಮಿವೆಂಕಟೇಶ್ವರ ದೇವಸ್ಥಾನ ವೆಂಕಟಗಿರಿ, ಶ್ರೀ ಚಂದಾಲಿಂಗೇಶ್ವರ ದೇವಸ್ಥಾನ, ಹನುಮಸಾಗರ ಹಾಗೂ ಕೊಪ್ಪಳ ಜಿಲ್ಲೆಯ ಮುಂತಾದ ಪ್ರವಾಸಿ ತಾಣಗಳು ಹಾಗೂ ಸ್ಮಾರಕಗಳ ಸ್ಪಷ್ಟ ಛಾಯಾಚಿತ್ರಗಳೊಂದಿಗೆ ನಿಖರವಾದ ಮಾಹಿತಿ ಸಂಗ್ರಹಿಸಿ, ಸಂಗ್ರಹಿಸಿದ ಈ ಮಾಹಿತಿಯನ್ನು ಸಹಾಯಕ ನಿರ್ದೇಶಕರ ಕಚೇರಿ, ಪ್ರವಾಸೋದ್ಯಮ ಇಲಾಖೆ, 2ನೇ ಮಹಡಿ, ಜಿಲ್ಲಾಡಳಿತ ಭವನ, ಹೊಸಪೇಟ ರಸ್ತೆ, ಕೊಪ್ಪಳ ಇಲ್ಲಿಗೆ ಅಥವಾ ಇ-ಮೇಲ್ ಇಂಠಿಠಿಚಿಟಣಾಂಣಡಿ-ಟಿಚ@ರಟಚಿಟ.ಛಿಂಟ ಮೂಲಕ ಜುಲೈ 31ರ ಸಾಯಂಕಾಲ 05 ಗಂಟೆಯೊಳಗಾಗಿ ಸಲ್ಲಿಸುವಂತೆ ಜಿಲ್ಲಾ ಪ್ರವಾಸೋದ್ಯಮ ಇಲಾಖೆಯ ಪ್ರಕಟಣೆ ತಿಳಿಸಿದೆ.

# ಯಲ್ಲಮ್ಮನ ಗುಡ್ಡಕ್ಕೆ ರೈಲ್ವೆ ಮಾರ್ಗ



**ಸವದತ್ತಿ :** 'ಲಕ್ಷಾಂತರ ಭಕ್ತರು ಭೇಟಿ ನೀಡುವ ಯಲ್ಲಮ್ಮ ದೇವಸ್ಥಾನಕ್ಕೆ ರೈಲ್ವೆ ಮಾರ್ಗ ಯೋಜನೆ ಹಾಗೂ ಈ ಭಾಗದಕ್ಕೆ ಏತ ನೀರಾವರಿ ಜಾರಿ ತಂದು ಜನತೆಗೆ ಅನುಕೂಲ ಕಲ್ಪಿಸಲು ಶ್ರಮ ವಹಿಸುವೆ' ಎಂದು ಸಂಸದ ಜಗದೀಶ ಶೆಟ್ಟರ್ ಹೇಳಿದರು.

ಇಲ್ಲಿನ ಮಾಮನಿ ಕಲ್ಯಾಣ ಮಂಟಪದಲ್ಲಿ ಮಂಗಳವಾರ ಜರುಗಿದ ಅಭಿನಂದನಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

'ಕ್ಷೇತ್ರದ ಜನತೆ ಮತ್ತು ಭಕ್ತಾದಿಗಳ ಬಹುದಿನದ ಬೇಡಿಕೆಯಾದ ರೈಲ್ವೆ ಮಾರ್ಗ ಕುರಿತು ಕೇಂದ್ರದ ರೈಲ್ವೆ ಸಚಿವರು ಹಾಗೂ ಅಧಿಕಾರಿಗಳ ಜೊತೆ ಚರ್ಚಿಸಲಾಗಿದೆ. ಇಲಾಖೆಯ ನುರಿತ ಅಧಿಕಾರಿಗಳಿಗೆ ಸಮೀಕ್ಷೆ ನಡೆಸಿ ಯೋಜನೆ ರೂಪಿಸಲು ಸೂಚಿಸಲಾಗಿದೆ. ಹಿಂದಿನ ಸಂಸದೆ ಮಂಗಳಾ ಅಂಗಡಿ ಕೇಂದ್ರದಿಂದ ರೂ. 11 ಕೋಟಿ ಅನುದಾನ ನೀಡಿ-ದ್ದಾರೆ. ಈ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದೆ. ಶೀಘ್ರದಲ್ಲಿ ಟೆಂಡರ್ ಕರೆಯಲು ಸೂಚಿಸಲಾಗಿದೆ' ಎಂದರು.

'ಕಳಸಾ-ಬಂಡೂರಿ, ಮಹದಾಯಿ ತಿರುವು ಕುರಿತು ಚರ್ಚಿಸಲಾಗಿದೆ. ಕರ್ನಾಟಕಕ್ಕೆ 13 ಟಿಎಂಸಿ ಅಡಿ ನೀರು ಹಂಚಿಕೆಗೆ ಆದೇಶಿಸಲಾಗಿದೆ. ಈಚೆಗೆ ತಂಡವೊಂದು ವೀಕ್ಷಿಸಿ ರಾಜ್ಯದ ಪರ ವರದಿ ನೀಡಿದೆ' ಎಂದರು. 'ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಜನರ ಅಹವಾಲು ಸ್ವೀಕರಿಸಿ ಅವರ ಸಮಸ್ಯೆಗೆ ಸ್ಪಂದಿಸುತ್ತೇನೆ. ತಾಲ್ಲೂಕಿನ ಎಲ್ಲ ಅಧಿಕಾರಿಗಳ ಜೊತೆ ಪ್ರತ್ಯೇಕ ಸಭೆ ನಡೆಸಿ ಕ್ಷೇತ್ರದ ಅಭಿವೃದ್ಧಿಗೆ ಒತ್ತು ನೀಡಲಾಗುವುದು' ಎಂದರು.

ಅಧಿಕಾರ ಇಲ್ಲವೆಂದು ಚಿಂತಿಸದಿರಿ: 'ಕಾರ್ಯಕರ್ತರು ಅಧಿಕಾರವಿಲ್ಲವೆಂದು ಚಿಂತಿಸದಿರಿ. ನೀವೇ ಮುಂದಾಳತ್ವ ವಹಿಸಿ ಜನ ಪರ ಹೋರಾಟ ನಡೆಸಿ. ಮುಂದಿನ ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಸೇರಿ ಎಲ್ಲ ಚುನಾವಣೆಗಳಲ್ಲೂ ಪಕ್ಷವನ್ನು ಅಧಿಕಾರಕ್ಕೇರಿಸಲು ಶ್ರಮಿಸಿರಿ' ಎಂದರು.

'ಮುಡಾ ಮತ್ತು ವಾಲ್ಮೀಕಿ ನಿಗಮ ಸೇರಿದಂತೆ ಕಾಂಗ್ರೆಸ್ ಸರಕಾರ ಹಗರಣಗಳ ಸುಳಿಯಲ್ಲಿ ಸಿಲುಕಿದೆ. ಪ್ರತಿ ವಿಧಾನಸಭಾ ಕ್ಷೇತ್ರಗಳಲ್ಲಿಯೂ ಹಿಂದಿನ ಬಿಜೆಪಿ ಸರ್ಕಾರದ ಕಾಮಗಾರಿಗಳು ಚಾಲ್ತಿಯಲ್ಲಿವೆ. ರಾಜ್ಯದಲ್ಲಿ ಅಭಿವೃದ್ಧಿಯೇ ಕೇಳುವಂತಿಲ್ಲ. ಹಣ ಮತ್ತು ಅಧಿಕಾರದ ದುರಪಯೋಗ ಮಾಡಿಕೊಂಡು ಚುನಾವಣೆಗೆ ಗೆಲ್ಲಲೆತ್ನಿಸಿದವರಿಗೆ ಜನತೆ ತಕ್ಕ ಉತ್ತರ ನೀಡಿದ್ದಾರೆ. ಈ ಎಲ್ಲ ಸನ್ನಿವೇಶ ಗಮನಿಸಿದರೆ ಕಾಂಗ್ರೆಸ್‌ಗೆ ಭವಿಷ್ಯ ಇಲ್ಲದಾಗಿದೆ' ಎಂದರು.

ಬಿಜೆಪಿ ಮುಖಂಡ ವಿರುಪಾಕ್ಷ ಮಾಮನಿ ಮಾತನಾಡಿ, 'ಕೆಲ ನ್ಯೂನತೆಗಳಿಂದ ಕ್ಷೇತ್ರದಲ್ಲಿ ಬಿಜೆಪಿಗೆ ಹಿನ್ನಡೆಯಾಗಿದೆ. ಎಲ್ಲರನ್ನು ವಿಶ್ವಾಸಕ್ಕೆ ಪಡೆದು ಈ ನ್ಯೂನತೆ ಸರಿಪಡಿಸಲು ಪ್ರಯತ್ನಿಸಲಾಗುವುದು' ಎಂದರು. ಸತ್ತಿಗೇರಿ ಏತ ನೀರಾವರಿ ಹಾಗೂ ಕಳಸಾ-ಬಂಡೂರಿ ಕಾಮಗಾರಿ ಶೀಘ್ರ ಪೂರ್ಣಗೊಳಿಸಬೇಕು. ಇದ-ರಿಂದ ಈ ಭಾಗದ ಎಲ್ಲ ರೈತರಿಗೆ ಅನುಕೂಲವಾಗಲಿದೆ. ಸಿಂಗಾರಗೊಪ್ಪ ಸೇರಿ ತಾಲ್ಲೂಕಿನ ಎಲ್ಲ ಜಾಕ್‌ವೆಲ್‌ನಲ್ಲಿ ಹಳೆಯದಾದ ಪಂಪಸೆಟ್‌ಗಳಿವೆ. ಇವುಗಳ ಪುನರುಜ್ಜೀವನಗೊಳಿಸಬೇಕಿದೆ. ಧಾರವಾಡ-ಸವದತ್ತಿ ಹೆದ್ದಾರಿ ನಿರ್ವಹಣೆ ಕೊರತೆ ಇದೆ' ಎಂದು ಸಂಸದರ ಗಮನಕ್ಕೆ ತಂದರು.

ಹನಮಂತ ನಿರಾಣಿ, ಮಹಾಂತೇಶ ಕವಟಗಿಮಠ, ಪ್ರದೀಪ ಶೆಟ್ಟರ್, ಶಂಕರ ಮಾಡಲಗಿ, ಸುಭಾಷ ಪಾಟೀಲ, ವಿರುಪಾಕ್ಷ ಹನಸಿ, ಎಫ್.ಎಸ್. ಸಿದ್ದನಗೌಡರ, ವೈ.ವೈ. ಕಾಳಪ್ಪನವರ, ಬಸವರಾಜ ಹನಸಿ, ಈರಣ್ಣ ಚಂದರಗಿ, ರತ್ನಾ ಮಾಮನಿ ಇದ್ದರು.

# ಬಾಲಕಿ ಸಾವು: ಡೆಂಗಿ ಶಂಕೆ



**ಬೆಳಗಾವಿ :** ಶಂಕಿತ ಡೆಂಗಿ ಜ್ವರದಿಂದ ಬಳಲುತ್ತಿದ್ದ ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರ ಪಟ್ಟಣದ 11 ವರ್ಷದ ಬಾಲಕಿ ಇಲ್ಲಿನ ಜಿಲ್ಲಾಸ್ಪತ್ರೆಯಲ್ಲಿ ಗುರುವಾರ ಮೃತಪಟ್ಟಿದ್ದಾಳೆ.

ಶ್ರೇಯಾ ಕೃಷ್ಣ ದಾವದಾಟೆ (11) ಮೃತ ಬಾಲಕಿ. ಜುಲೈ 8ರಂದು ತೀವ್ರ ಜ್ವರ ಕಾಣಿಸಿಕೊಂಡ ಕಾರಣ ಸಂಕೇಶ್ವರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಕೊಡಿಸಲಾಗಿತ್ತು. ಬಾಲಕಿಗೆ ಡೆಂಗಿ ಲಕ್ಷಣಗಳು ಇರುವ ಕಾರಣ ಹೆಚ್ಚಿನ ಚಿಕಿತ್ಸೆಗೆ ಜಿಲ್ಲಾಸ್ಪತ್ರೆಗೆ ಕರೆತರಲಾಗಿತ್ತು. ಗುರುವಾರ ಕೊನೆಯುಸಿರೆಳೆದಳು ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ. ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯೆ ನೀಡಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಮಹೇಶ್ ಕೋಣಿ, 'ಬಾಲಕಿಯ ರಕ್ತದಮಾದರಿಗಳನ್ನುರ್ಯಾಪಿಡ್‌ಪರೀಕ್ಷೆಮಾಡಿಸಿದಾಗ ಡೆಂಗಿ ತಗುಲಿದ್ದು ಗೊತ್ತಾಗಿದೆ. ಆದರೆ, ಬೆಳಗಾವಿಯ ಪ್ರಯೋಗಾಲಯದಲ್ಲಿ ಪಿಸಿಆರ್ ತಪಾಸಣೆ ಮಾಡಿದ ಕಾಲಕ್ಕೆ ನೆಗೆಟಿವ್ ಬಂದಿದೆ. ಟಾಯಿಫೈಡ್ ಹಾಗೂ ಸೆಪ್ಟಿಮಿಯಾಎಂಬಕಾಯಿಲೆಗಳುಅಂಟಿಕೊಂಡಿದ್ದವು. ಚಿಂತಾಜನಕ ಸ್ಥಿತಿಯಲ್ಲಿದ್ದ ಬಾಲಕಿಗೆ ವೆಂಟಿಲೇಟರ್ ನೆರವು ನೀಡಲಾಗಿತ್ತು. ಆದರೂ ಚಿಕಿತ್ಸೆಗೆ ಸ್ಪಂದಿಸದೇ ಸವಾಲಾಗಿದೆ' ಎಂದರು.

'ಈವರೆಗೆ ಜಿಲ್ಲೆಯಲ್ಲಿ 1,500 ಶಂಕಿತ ಡೆಂಗಿ ಪ್ರಕರಣಗಳ ಪರೀಕ್ಷೆ ಮಾಡಲಾಗಿದ್ದು, 209 ಮಂದಿಗೆ ಮಾತ್ರ ಸೋಂಕು ದೃಢಪಟ್ಟಿದೆ' ಎಂದರು.

## ನಿರ್ಮಿತಿ ಕೇಂದ್ರದ ಯೋಜನಾಧಿಕಾರಿ ಪಿ.ಜಿ.ಗಳ ಮೇಲೆ ಲೋಕಾದಾಳಿ



**ಧಾರವಾಡ :** ಬೆಳಗಾವಿ ನಿರ್ಮಿತಿ ಕೇಂದ್ರದ ಯೋಜನಾಧಿಕಾರಿ ಪಿ.ಜಿ.ಗಳ ಮೇಲೆ ಇಂದು ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ.
ಯೋಜನಾಧಿಕಾರಿ ಶೇಖರಗೌಡರಿಗೆ ಸೇರಿದ ಇಲ್ಲಿನ ರಾಧಾಕೃಷ್ಣನಗರ ಹಾಗೂ ಕೆಸಿಡಿ ಬಳಿ ಇರುವ ಪಿ.ಜಿ.ಗಳ ಮೇಲೆ ಏಕಕಾಲಕ್ಕೆ ಲೋಕಾಯುಕ್ತ ಅಧಿಕಾರಿಗಳು ಬೆಳಂಬೆಳಿಗ್ಗೆ ದಾಳಿ ನಡೆಸಿದರು.
ಶೇಖರಗೌಡ ಅವರು ಧಾರವಾಡ, ಬೆಳಗಾವಿ, ಕೊಪ್ಪಳ ಸೇರಿ ಹಲವು ಕಡೆ ಅಕ್ರಮ ಆಸ್ತಿ ಸಂಪಾದನೆ ಮಾಡಿರುವ ಕುರಿತಂತೆ ಲೋಕಾಯುಕ್ತ ದಾಳಿ ನಡೆದಿದೆ ಎಂದು ತಿಳಿದುಬಂದಿದೆ.

# ಯುವ ಪೀಳಿಗೆಯಲ್ಲಿ ದೇಶಪ್ರೇಮ ಹೆಚ್ಚಿಸಲು ವಿಶೇಷ ಕಾರ್ಯಕ್ರಮ

**ಧಾರವಾಡ :** ಯುವ ಪೀಳಿಗೆ ಮತ್ತು ವಿದ್ಯಾರ್ಥಿಗಳಲ್ಲಿ ದೇಶಪ್ರೇಮ, ದೇಶಭಕ್ತಿ ಹುಟ್ಟಿಸುವ ನಿಟ್ಟಿನಲ್ಲಿ ಅಖಂಡ ಧಾರವಾಡ ಜಿಲ್ಲೆ ಹಾಗೂ ಸುತ್ತಲಿನ ಸ್ವಾತಂತ್ರ್ಯ ಹೋರಾಟಗಾರರ ಕುರಿತು ವಿಶೇಷ ನೃತ್ಯ ರೂಪಕಗಳನ್ನು ಬರುವ ಅಗಸ್ಟ್ 15 ರಂದು ಜಿಲ್ಲಾ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗುವುದೆಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ತಿಳಿಸಿದರು.




ಈ ನಿಟ್ಟಿನಲ್ಲಿ ಜಿಲ್ಲಾಧಿಕಾರಿಗಳ ನೂತನ ಸಭಾಂಗಣದಲ್ಲಿ ಜರುಗಿದ ಸರಕಾರಿ, ಅನುದಾನಿತ ಹಾಗೂ ಖಾಸಗಿ ಶಾಲಾ-ಕಾಲೇಜುಗಳ ಪ್ರಾಂಶುಪಾಲರ, ವಿವಿಧ ಸಂಘ-ಸಂಸ್ಥೆಗಳ ಪ್ರತಿನಿಧಿಗಳ ಹಾಗೂ ಬಿಇಓಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.
ಪ್ರಸಕ್ತ ಸಾಲಿನ ಅಗಸ್ಟ್ 15 ಸ್ವಾತಂತ್ರ್ಯೋತ್ಸವವನ್ನು ವಿನೂತನವಾಗಿ ಹಾಗೂ ಅರ್ಥಪೂರ್ಣವಾಗಿ ಆಚರಿಸುವ ನಿಟ್ಟಿನಲ್ಲಿ ಯುವ ವಿದ್ಯಾರ್ಥಿಗಳಲ್ಲಿ ದೇಶಪ್ರೇಮ ಅರಳಿಸುವ ನಿಟ್ಟಿನಲ್ಲಿ ಜಿಲ್ಲೆಯ ಐದಾರು ಸ್ವತಂತ್ರ ಹೋರಾಟಗಳ ಸನ್ನಿವೇಶ ಕುರಿತಾದನೃತ್ಯಹಾಗೂದೃಶ್ಯರೂಪಕಗಳನ್ನು ಆಯೋಜಿಸಲಾಗುವುದೆಂದು ಜಿಲ್ಲಾಧಿಕಾರಿಗಳು ತಿಳಿಸಿದರು.
ಸ್ಥಳೀಯ ಸ್ವತಂತ್ರ ಹೋರಾಟಗಾರರ ಕುರಿತು ಜಾಗೃತಿ ಮೂಡಿಸುವ ಘಟನೆಗಳು, ವ್ಯಕ್ತಿ ಹೋರಾಟ ಕುರಿತು ನೃತ್ಯ ಅಥವಾ ದೃಶ್ಯ ರೂಪಕಗಳನ್ನು ತಾಲೂಕಾವಾರು ಹಮ್ಮಿಕೊಂಡು, ಆಯ್ಕೆಯಾದ ತಂಡಗಳಿಂದ ಜಿಲ್ಲಾ ಕೇಂದ್ರಗಳಲ್ಲಿ ಸ್ಪರ್ಧಾ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವುದು. ವಿಜೇತರಿಗೆ ಉಸ್ತುವಾರಿ ಸಚಿವರಿಂದ ಬಹುಮಾನ ವಿತರಿಸಲಾಗುವುದೆಂದರು. ಈ ನಿಟ್ಟಿನಲ್ಲಿ ತಾಲೂಕಾ ಮಟ್ಟದ ಬಿಇಓಗಳು ಕಾರ್ಯಪ್ರವರ್ತರಾಗುವಂತೆ ತಿಳಿಸಿದರು.
ಬಾಲಬಳಗ ಶಾಲೆಯ ಅಧ್ಯಕ್ಷರಾದ ಡಾ. ಸಂಜೀವ ಕುಲಕರ್ಣಿ ಮಾತನಾಡಿ ಸ್ವಾತಂತ್ರ ಹೋರಾಟದಲ್ಲಿ ಚರಕವು ಅಸ್ತ್ರವಾಗಿದ್ದು ಅಹಿಂಸೆಯ ಸಂಕೇತವಾಗಿತ್ತು. ಈ ಹಿನ್ನೆಲೆಯಲ್ಲಿ ಬಾಲಬಳಗದ ವಿದ್ಯಾರ್ಥಿಗಳಿಂದ ಚರಕ ನೂಲುವ ಬಗ್ಗೆ ಪ್ರಾತ್ಯಕ್ಷಿಕೆ ನೀಡಲಾಗುವುದೆಂದು ತಿಳಿಸಿದರು.
ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಶಂಕರ ಹಲಗತ್ತಿ ಅವರು ಮಾತನಾಡಿ ಧಾರವಾಡ ಜಿಲ್ಲೆಯಲ್ಲಿ ಅನೇಕ ಜಾನಪದ ಹಾಗೂ ರಂಗಕಲಾವಿದರುಗಳಿದ್ದು ಚಿಕ್ಕ ಚಿಕ್ಕ ಬರಹಗಳನ್ನು ಬಳಸಿ ಸ್ವಾತಂತ್ರ್ಯ ಚಳುವಳಿಯ ಬಗ್ಗೆ ರೂಪಕ ಹಮ್ಮಿಕೊಳ್ಳಬಹುದಾಗಿದೆಯೆಂದರು.
ಹಿರಿಯ ಕಲಾವಿದರಾದ ಡಾ. ವಿಶ್ವೇಶ್ವರಿ ಹಿರೇಮಠಮಾತನಾಡಿದೇಶಭಕ್ತಿಗೀತೆಗಳನ್ನು ಬಳಸಿ ವೈವಿದ್ಯಮಯ ವೇಷಭೂಷಣಗಳ ನೃತ್ಯ ರೂಪಕಗಳನ್ನು ಜಿಲ್ಲೆಯಾದ್ಯಂತ ಆಯೋಜಿಸಬಹುದಾಗಿದೆಯೆಂದು ಅಭಿಪ್ರಾಯಪಟ್ಟರು.
ರಂಗಾಯಣ ಕಲಾವಿದ ನದಾಫ್ ಅವರು ನೂರಾರು ವಿದ್ಯಾರ್ಥಿಗಳ 20 ನಿಮಿಷಗಳ ಸ್ವಾತಂತ್ರ್ಯ ಹೋರಾಟದ ನೃತ್ಯ ರೂಪಕ ಏರ್ಪಡಿಸಬಹುದೆಂದು ತಿಳಿಸಿದರು.
ಡಿಡಿಪಿಐ ಎಸ್.ಎಸ್.ಕೆಳದಿಮಠ ಮಾತನಾಡಿ ನರಗುಂದ ಬಂಡಾಯ, ಅದರಗುಂಚಿ ಶಂಕರ ಗೌಡ್ರ, ಅಂದಾನಪ್ಪ ದೊಡ್ಡಮೇಟಿ,
ಮೈಲಾರ ಮಹಾದೇವ, ಮುಂಡರಗಿ ಭೀಮರಾಯ ಸೇರಿದಂತೆ ಹಲವರು ಹೋರಾಟದ ಚಳುವಳಿ ಆಧಾರಿತ ರೂಪಕಗಳನ್ನು ಹಮ್ಮಿಕೊಳ್ಳಬಹುದಾಗಿದೆ. ಈನಿಟ್ಟಿನಲ್ಲಿಧಾರವಾಡದಶಾಲಾ-ಕಾಲೇಜು, ಸಂಘ ಸಂಸ್ಥೆಗಳ ಪ್ರತಿನಿಧಿಗಳು, ಕಲಾವಿದರ ಸಭೆಯನ್ನುಜುಲೈ12 ರಂದು ವಿದ್ಯಾವರ್ಧಕ ಸಂಘದಲ್ಲಿ ಆಯೋಜಿಸಲಾಗುವುದೆಂದು ತಿಳಿಸಿದರು.
ಉಪವಿಭಾಗಾಧಿಕಾರಿ ಶಾಲಂ ಹುಸೇನ್, ಪದವಿಪೂರ್ವಕಾಲೇಜಗಳಉಪನಿರ್ದೇಶಕ ಸುರೇಶ ವೇದಿಕೆಯಲ್ಲಿದ್ದರು. ವಿವಿಧ ಕಲಾವಿದರು,ಸಂಘಸಂಸ್ಥೆಗಳಪ್ರತಿನಿಧಿಗಳು, ಎಲ್ಲ ತಾಲೂಕುಗಳ ಬಿಇಓಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

# ಪರಿಸರ ಕಾಳಜಿ ಅತ್ಯಗತ್ಯ



**ಶಿರಹಟ್ಟಿ :** ಪ್ರಸ್ತುತ ದಿನಮಾನದಲ್ಲಿ ಮಾರಣಾಂತಿಕ ಕಾಯಿಲೆಗಳು ಕಂಡುಬರುತ್ತಿದ್ದು, ಆರೋಗ್ಯ ಯುತ ಜೀವನಕ್ಕೆ ಪರಿಸರ ಬಹಳ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ಪರಿಸರದ ಕಾಳಜಿ ಹೊಂದುವುದು ಅಗತ್ಯವಿದೆ ಎಂದು ಶಾಸಕ ಚಂದ್ರು ಲಮಾಣಿ ಹೇಳಿದರು.
ಅವರು ಪಟ್ಟಣದ ಎಫ್.ಬಿ.ಪೂಜಾರ ಸರಕಾರಿ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಅರಣ್ಯ ಇಲಾಖೆ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ ಕಾಲೇಜಿನ ಆವರಣದಲ್ಲಿ ವನಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.
ಪರಿಸರ ಶುದ್ಧವಾಗಿದ್ದಷ್ಟು ಮನುಷ್ಯನ ಜೀವನ ಆರೋಗ್ಯಕರವಾಗಿರುತ್ತದೆ. ಯಾವುದೇ ರೋಗ ರುಜಿನಗಳಿಲ್ಲದೇಸ್ವಚ್ಛಂದವಾಗಿ ಬದುಕಲು ಕಾರಣವಾಗುತ್ತದೆ. ಪ್ರತಿಯೊಬ್ಬರೂ ಕೊಳೆಯುವ ಕಸ ಮತು ಕೊಳೆಯಲಾರದ ಕಸದ ಬಗ್ಗೆ ಜಾಗೃತಿ ಹೊಂದಿ ಕೊಳೆಯಲಾರದ ವಸ್ತುಗಳನ್ನು ಬಳಕೆ ಮಾಡಿಕೊಳ್ಳುವುದನ್ನು ನಿಲ್ಲಿಸಬೇಕು. ಭವಿಷ್ಯದಲ್ಲಿ ಉತ್ತಮ ಜೀವನ ರೂಪಿಸಿಕೊಳ್ಳಬೇಕಾದ ವಿದ್ಯಾರ್ಥಿಗಳಲ್ಲಿ ಪರಿಸರದ ಕಾಳಜಿಯ ಜಾಗೃತಿ ಹೊಂದುವುದು ಅಗತ್ಯವಿದೆ ಎಂದು ಹೇಳಿದರು.
ಕಾಲೇಜಿನ ಪ್ರಾಚಾರ್ಯ ಬಿ.ಜಿ.ಗಿರಿತಿಮ್ಮಣ್ಣವರ ಮಾತನಾಡಿ, ಅರಣ್ಯ ಪ್ರದೇಶಗಳನ್ನು ಹೆಚ್ಚಿಸಬೇಕು. ಪ್ರತಿಯೊಬ್ಬರೂ ಸಸಿಗಳನ್ನು ನೆಡುವ ಮೂಲಕ ಪರಿಸರದ ಕಾಳಜಿಯನ್ನು ಮೆರೆಯಬೇಕು. ಇರುವ ಅರಣ್ಯ ಪ್ರದೇಶ ನಾಶವಾಗದಂತೆ ಕಾಪಾಡಿಕೊಳ್ಳವುದು ಅಗತ್ಯವಿದೆ ಎಂದು ಹೇಳಿದರು.
ಅರಣ್ಯ ಇಲಾಖೆಯ ಅಧಿಕಾರಿಗಳಾದ ಎಮ್.ಡಿ.ಕೌಷಿಕ್, ರಮೇಶ, ಉಪನ್ಯಾಸಕರಾದ ಎಸ್.ಎವಾಯ್.ಮುಜಾವರ, ರಾಜೇಶ್ವರ ಸಂಶಿ, ಪರಿಮಳಾ, ಎನ್.ಟಿ.ಮಾಳೋದೆ, ಚಿನ್ಮಯಿ ಕಪ್ಪತ್ತನವರ, ವಿಜಯಶ್ರೀ, ಗೌತಮ ಕಪ್ಪತ್ತನವರ, ಶ್ರೀನಿವಾಸ ಕಪಟಕರ, ನಟರಾಜ ರಾನಡೆ, ಕಾಲೇಜಿನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಲಕ್ಷ್ಮೇಶ್ವರ: ಡೆಂಘೀ ನಿಯಂತ್ರಣದ ಅರಿವು ಮೂಡಿಸಿ

**ಲಕ್ಷ್ಮೇಶ್ವರ :** ಡೆಂಘೀ ನಿಯಂತ್ರಣ ಪ್ರತಿಯೊಬ್ಬರ ಜವಾಬ್ದಾರಿಯಾಗಿದ್ದು, ಡೆಂಘೀ ನಿಯಂತ್ರಣದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿ ಎಂದು ಗದಗ ಜಿಪಂ ಯೋಜನಾ ನಿರ್ದೇಶಕರು ಮತ್ತು ತಾಪಂ ಆಡಳಿತಾಧಿಕಾರಿ ಎಂ.ವಿ. ಚಳಗೇರಿ ನಿರ್ದೇಶನ ನೀಡಿದರು.
ಲಕ್ಷ್ಮೇಶ್ವರ ತಾಲೂಕು ಪಂಚಾಯತಿಯ ಸಭಾಂಗಣದಲ್ಲಿ ಹಮ್ಮಿಕೊಂಡ ಮಾಸಿಕ ಪ್ರಗತಿ ಪರಿಶೀಲನಾ ಸಭೆ ಹಾಗೂ ಡೆಂಘೀ ನಿಯಂತ್ರಣ ಕುರಿತಂತೆ ಕರೆಯಲಾಗಿದ್ದ ತಾಲೂಕು ಮಟ್ಟದ ಅಧಿಕಾರಿಗಳ ಸಭೆ ಉದ್ದೇಶಿಸಿ ಅವರು ಮಾತನಾಡಿದರು.
ಡೆಂಘೀಮಹಾಮಾರಿತುಂಬಿತುಳುಕುತ್ತಿದ್ದು, ಸೋಂಕು ನಿವಾರಣೆಗಾಗಿ ತಾಲೂಕು ಆಡಳಿತ ಮತ್ತು ತಾಲೂಕು ಪಂಚಾಯತಿ, ಆರೋಗ್ಯ ಇಲಾಖೆ ಸಮರೋಪಾದಿಯಲ್ಲಿ ಕಾರ್ಯನಿರ್ವಹಿಸಬೇಕು.ಲಕ್ಷ್ಮೇಶ್ವರಪಟ್ಟಣ ಹಾಗೂ ಗ್ರಾಮ ಪಂಚಾಯತಿ ವ್ಯಾಪ್ತಿಯ ಪ್ರತಿ ಮನೆಬಾಗಿಲಿಗೆತೆರಳಿಸಮೀಕ್ಷೆಕೈಗೊಳ್ಳಬೇಕು. ನೀರು ಅಲ್ಲಲ್ಲಿ ಸಂಗ್ರಹಗೊಳ್ಳದಂತೆ ಜಾಗೃತಿ ಮೂಡಿಸಬೇಕು. ಎಲ್ಲಿಯಾದರೂ ಮನೆಗಳಲ್ಲಿ ನೀರು ಸಂಗ್ರಹಗೊಂಡಿರುವುದು ಗಮನಕ್ಕೆಬಂದರೆತಕ್ಷಣ ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆಸಲಹೆನೀಡಿದರು.ಗ್ರಾಮೀಣ ಭಾಗಗಳಲ್ಲಿ ಸ್ವಚ್ಛತೆ ಕಾಪಾಡುವಂತೆ ಎಚ್ಚರಿಕೆ ನೀಡಬೇಕು. ಸರಕಾರಿ ಮತ್ತು ಖಾಸಗಿ ಪ್ರದೇಶಗಳಲ್ಲಿ ನೀರು ನಿಂತಿರುವ ಕಡೆಗಳಲ್ಲಿ ಸೊಳ್ಳೆ ನಿಯಂತ್ರಣ ದ್ರಾವಣ ಸಿಂಪರಣೆ ಮಾಡಬೇಕೆಂದು ಸೂಚನೆ ನೀಡಿದರು.
ತಾಲೂಕುಹಿರಿಯಆರೋಗ್ಯನಿರೀಕ್ಷಣಾಧಿಕಾರಿ ಬಿ.ಎಸ್. ಹಿರೇಮಠ ಅವರು ಮಾತನಾಡಿ, ಡೆಂಘೀಜ್ವರವೈರಸ್‌ನಿಂದುಬರುವಸಾಂಕ್ರಾಮಿಕ ರೋಗವಾಗಿದ್ದು, ಇದು ಸೋಂಕಿತ ಈಡೀಸ್ ಜಾತಿಯ ಸೊಳ್ಳೆಯ ಕಡಿತದಿಂದ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ. ಈ ಸೊಳ್ಳೆಗಳು ಸಾಮಾನ್ಯವಾಗಿಸ್ವಚ್ಛನಿಂತನೀರಿನಲ್ಲಿಹಾಗೂ ನೀರು ಶೇಖರಣೆ ಸಲಕರಣೆಗಳಲ್ಲಿ ಮೊಟ್ಟೆ ಇಟ್ಟು ಸಂತನಾಭಿವೃದ್ಧಿ ಮಾಡುತ್ತವೆ. ಈ ಸೊಳ್ಳೆಯ ಬಹುತೇಕ ಹಗಲು ಹೊತ್ತಿನಲ್ಲಿ ಕಚ್ಚುತ್ತವೆ. ಹಾಗಾಗಿ ಡೆಂಘಿ ಜ್ವರ ಹತೋಟಿ ಪ್ರತಿಯೊಬ್ಬರ ಕೈಯಲ್ಲಿದೆ. ಪ್ರತಿಯೊಬ್ಬರು ತಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಈ ನಿಟ್ಟಿ ಅಗತ್ಯ ಜಾಗೃತಿ ಕಾರ್ಯಕ್ರಮಗಳನ್ನು ಆರೋಗ್ಯ ಇಲಾಖೆಯಿಂದ ಹಮ್ಮಿಕೊಂಡು ಡೆಂಘೀ ನಿಯಂತ್ರಣಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದರು. ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿ ಪ್ರಕಾಶ ಕರ್ಜಗಿ ಮಾತನಾಡಿ, ಒಂದುಸೋಂಕಿತಸೊಳ್ಳೆಯುಮನುಷ್ಯನನ್ನು ಕಚ್ಚಿದ 8ರಿಂದ 14 ದಿನಗಳ ನಂತರ ಡೆಂಘೀ ಜ್ವರದ ಲಕ್ಷಣಗಳು ಕಂಡು ಬರುತ್ತವೆ. ತೀವ್ರ ಜ್ವರ, ವಿಪರೀತ ತಲೆನೋವು, ಕಣ್ಣುಗಳ ಹಿಂಭಾಗದಲ್ಲಿ ನೋವು, ಚರ್ಮದ ಮೇಲೆ ಗುಳ್ಳೆಗಳು, ಮಾಂಸ ಖಂಡಗಳಲ್ಲಿ ನೋವು ಕಾಣಿಸಿಕೊಳ್ಳುವುದು,ತೀವ್ರಸ್ಥಿತಿಯಲ್ಲಿಬಾಯಿ, ಮೂಗು ಮತ್ತು ಒಸಡುಗಳಿಂದ ರಕ್ತಸ್ರಾವ ಕಾಣಿಸಿಕೊಳ್ಳುತ್ತದೆ.ಡೆಂಘೀಜ್ವರಕ್ಕೆಯಾವುದೇ ನಿರ್ಧಿಷ್ಟಚಿಕಿತ್ಸೆಅಥವಾ ಲಸಿಕೆಯಾಗಲಿ ಇಲ್ಲ. ಈ ರೋಗದ ಲಕ್ಷಣಗಳಿಗನುಸಾರವಾಗಿ ವೈದ್ಯರಿಂದ ಸೂಕ್ತ ಚಿಕಿತ್ಸೆ ಪಡೆಯಬಹುದು. ಈನಿಟ್ಟಿನಲ್ಲಿ ಆರೋಗ್ಯ ಇಲಾಖೆಯು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ ಎಂದರು. ನಿಂತ ನೀರು ಸೊಳ್ಳೆಯ ತವರು, ಆದ್ದರಿಂದ ಎಲ್ಲ ಬಗೆಯ ನೀರಿನ ತೊಟ್ಟಿ ಡ್ರಮ್, ಬ್ಯಾರಲ್, ವಾರಕೊಮ್ಮೆ ಖಾಲಿ ಮಾಡಿ ಮತ್ತು ಸ್ವಚ್ಛಗೊಳಿಸಿ ಒಣಗಿಸಿ ಪುನಃ ನೀರು ತುಂಬಿ ಸೊಳ್ಳೆಗಳು ನುಸುಳದಂತೆ ಮುಚ್ಚಳಿಕೆಯಿಂದ ಭದ್ರವಾಗಿ ಮುಚ್ಚಬೇಕು. ಮನೆಯ ಒಳಗೆ ಮತ್ತು ಮನೆಯ ಸುತ್ತಮುತ್ತ ನೀರು ನಿಲ್ಲದಂತೆ ಎಚ್ಚರವಹಿಸಿ ಸೊಳ್ಳೆ ಉತ್ಪತ್ತಿಯನ್ನುತಡೆಗಟ್ಟಬೇಕು.ಮನೆಯಸುತ್ತ ಬಯಲಿನಲ್ಲಿ ಮತ್ತು ಮಾಳಿಗೆ ಮೇಲೆ ಟೈರ್ ಟ್ಯೂಬ್, ಹೂವಿನ ಕುಂಡ, ಒಡೆದ ಬಾಟಲಿ ಮುಂತಾದವುಗಳಲ್ಲಿ ನೀರು ನಿಲ್ಲದಂತೆ ಎಚ್ಚರಿಕೆ ವಹಿಸಬೇಕು.
ಈಡೀಸ್ ಸೊಳ್ಳೆಯು ಹಗಲು ಹೊತ್ತಿನಲ್ಲಿ ಕಚ್ಚುವುದರಿಂದ ಈ ಸಮಯದಲ್ಲಿ ಆದಷ್ಟು ಮೈತುಂಬಾ ಬಟ್ಟೆಯನ್ನು ಧರಿಸಬೇಕು ಮನೆಯ ಒಳಗೆ ಸೊಳ್ಳೆ ಬರದಂತೆ ಕಿಟಕಿ, ಬಾಗಿಲುಗಳಿಗೆ ಜಾಲರಿ ಅಳವಡಿಸುವುದು ಹಾಗೂ ಸೊಳ್ಳೆ ನಿರೋಧಕ ಬಳಸಬೇಕು. ಮಲಗುವಾಗ ಸೊಳ್ಳೆ ಪರದೆಯನ್ನು ಉಪಯೋಗಿಸಬೇಕು.

# ಶಾಲಾ ಸಂಸತ್ ರಚನೆ



**ಬಾದಾಮಿ :** ತಾಲೂಕಿನ ಕಾತರಕಿ ಗ್ರಾಮದ ಸರಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯಲ್ಲಿ, ಶಾಲಾ ಸಂಸತ್ ರಚನೆ ಮಾಡಲಾಯಿತು.
ಶಾಲೆಯಲ್ಲಿ ನಡೆದ ಚುನಾವಣೆಯಲ್ಲಿ ಈ ಕೆಳಗಿನಂತೆ ವಿವಿಧ ಹುದ್ದೆಗಳಲ್ಲಿ ಆಯ್ಕೆ ಮಾಡಲಾಯಿತು.
ಪ್ರಧಾನಮಂತ್ರಿ-ಕುಮಾರ ಪ್ರೀತಮ್ ಹುಲ್ಲೂರ, ಉಪ ಪ್ರಧಾನಿ-ಕುಮಾರಿ ಪೂರ್ಣಿಮಾ ಶಿವಪುರ, ಶಿಕ್ಷಣ ಮಂತ್ರಿ-ಪ್ರಶಾಂತ್ ಕುರಿ, ಪರಿಸರ ಮಂತ್ರಿ-ರಂಗನಾಥ್ ಕಾಟಾಪುರ, ಆರೋಗ್ಯಮಂತ್ರಿ-ಬಿಂದು ಗೌಡರ. ಗ್ರಂಥಾಲಯ ಮಂತ್ರಿ-ಶ್ರುತಿ ರೇಮ, ಕ್ರೀಡಾ ಮಂತ್ರಿ-ವೀರಣ್ಣ ಹುರುಳಿ, ಪ್ರವಾಸ ಮಂತ್ರಿ-ಮೃತುಂಜಯ ಸಂಕೀನವರ, ಹಣಕಾಸಿನ ಮಂತ್ರಿ-ಸುಶ್ಮಿತಾ ರೋಣದ, ಸಂಸ್ಕೃತಿಕ ಚಟುವಟಿಕೆಗಳ ಮಂತ್ರಿ-ಸರಸ್ವತಿ ಕಂಬಳಿ, ಆಹಾರ ಮತ್ತು ಊಟದ ನಿರ್ವಹಣಾ ಮಂತ್ರಿ-ಸುಧಾ ಗೌಡರ ಇವರನ್ನು ಮತದಾನದ ಮೂಲಕ ವಿದ್ಯಾರ್ಥಿಗಳಿಂದ ಆಯ್ಕೆ ಮಾಡಲಾಯಿತು.
ಈ ಸಂದರ್ಭದಲ್ಲಿ ಶಾಲೆಯ ಮುಖ್ಯೋಪಾಧ್ಯಾಯ ಆರ್. ಎಂ.ಸಾರವಾಡ ಸೇರಿದಂತೆ ಶಿಕ್ಷಕ ಸಿಬ್ಬಂದಿಯವರು ಮತ್ತು ಬಿಸಿಯೂಟ ಸಿಬ್ಬಂದಿಯವರು ಉಪಸ್ಥಿತರಿದ್ದು, ಚುನಾಯಿತರಾದಂತ ವಿದ್ಯಾರ್ಥಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಿದರು.

# ಬೈಲಹೊಂಗಲ: ಸೇವಾದಳದ ಮಕ್ಕಳಿಗೆ ಸಮವಸ್ತ್ರ

**ಬೈಲಹೊಂಗಲ :** ಪ್ರತಿ ಶಾಲೆಯಲ್ಲಿ ಸೇವಾದಳಕ್ಕೆ ಸೇರುವ ಮಕ್ಕಳಿಗೆ ಸಮವಸ್ತ್ರ ಕೊಡಲು ಭಾರತ ಸೇವಾದಳ ಬೆಳಗಾವಿ ಘಟಕ ಸಿದ್ದವಿದೆ ಎಂದು ಜಿಲ್ಲಾಧ್ಯಕ್ಷ ಮಹಾಂತೇಶ ತುರಮರಿ ಭರವಸೆ ನೀಡಿದರು.
ಪಟ್ಟಣದ ಶಾಸಕರ ಮತಕ್ಷೇತ್ರ ಮಾದರಿ ಶಾಲೆ ನಂ.4 ರಲ್ಲಿ ನಡೆದ ಜಿಲ್ಲಾ ಪಂಚಾಯಿತಿ ಬೆಳಗಾವಿ, ಭಾರತ ಸೇವಾದಳ ಜಿಲ್ಲಾ ಸಮಿತಿ ಬೆಳಗಾವಿ, ಶಿಕ್ಷಣ ಸಾಕ್ಷರತಾ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ಶಿಕ್ಷಕ/ ಶಿಕ್ಷಕಿಯರ ಪುನಶಚೇತನ ಶಿಬಿರದಲ್ಲಿ ಅವರು ಮಾತನಾಡಿ, ಶಿಸ್ತಿಗೆ ಹೆಸರುವಾಸಿಯಾಗುರುವ ಭಾರತ ಸೇವಾದಲದಲ್ಲಿ ಸಮವಸ್ತ್ರಕ್ಕೆ ವಿಶೇಷ ಮಹತ್ವ



ನೀಡಲಾಗಿದೆ. ಅದರಂತೆ ಸೇವಾದಳಕ್ಕೆ ಸೇರ್ಪಡೆಗೊಳ್ಳುವ ಮಕ್ಕಳಿಗೂ ಕೂಡ ಸಮವಸ್ತ್ರ ಕಡ್ಡಾಯ.
ಶಾಲೆಗಳಲ್ಲಿ ಭಾರತ ಸೇವಾದಳದ ಮಕ್ಕಳ ಸಮವಸ್ತ್ರಕ್ಕೆ ಅನುದಾನ ಇಲ್ಲದೆ ಇರಬಹುದು. ಸರಕಾರಿ ಶಾಲೆಗಳಲ್ಲಿ ಬಡವರ್ಗದ ಮಕ್ಕಳೇ ವ್ಯಾಸಂಗ ಮಾಡುತ್ತಿರುವುದರಿಂದ ಪಾಲಕರಿಗೂ ಹೊರೆಯಾಗ ಬಾರದು ಎಂಬ ಸದುದ್ದೇಶದಿಂದ ಭಾರತ ಸೇವಾದಳಕ್ಕೆ ಸೇರುವ ಮಕ್ಕಳಿಗೆ ಉಚಿತ ಸಮವಸ್ತ್ರ ವಿತರಿಸುವ ಬಗ್ಗೆ ಭಾರತ ಸೇವಾದಳ ಜಿಲ್ಲಾ ಸಮಿತಿ ಚಿಂತನೆ ನಡೆಸಿದೆ. ಆದಷ್ಟು ಬೇಗ ತಾಲೂಕಿನ ಶಾಲೆಗಳಲ್ಲಿನ ಮಕ್ಕಳ ಸಂಖ್ಯೆ ನೀಡಬೇಕೆಂದು ಸೇವಾದಳದ ಪದಾಧಿಕಾರಿಗಳಿಗೆ ಸೂಚಿಸಿದರು.
ಕಾರ್ಯಕ್ರಮ ಅಧ್ಯಕ್ಷತೆಯನ್ನು ತಾಲೂಕು ದೈಹಿಕ ಶಿಕ್ಷಕರ ಪರಿವೀಕ್ಷರರಾದ ಎಸ್.ಜಿ. ಹೊರಟ್ಟಿ ವಹಿಸಿದ್ದರು. ಕೋಶಧ್ಯಕ್ಷ ಸುಭಾಷ್ ತುರಮರಿ,ಶಾಲೆ ಮುಖ್ಯೋಪಾಧ್ಯಾಯರಾದ ಸಿ.ಬಿ. ಶೀಗಿಹಳ್ಳಿ, ಪ್ರಭಾರಿ ಮುಖ್ಯೋಪಾಧ್ಯಾಯರಾದ ಎಂ.ವ್ಹಿ ಭದ್ರಶೆಟ್ಟಿ, ಸೇವಾದಳದ ಜಿಲ್ಲಾ ಸಮಿತಿ ಸದಸ್ಯರು .ಬಿ ಬಿ ಬಸಕ್ರಿ, ಪ್ರಾ.ಶಾ.ಶಿ ಸಂಘದ ಸದಸ್ಯರು.ಎಸ್ ಬಿ. ಜಕಾತಿ ಉಪಸ್ಥಿತರಿದ್ದು, ಸೇವಾದಳದ ಜಿಲ್ಲಾ ಸಂಘಟಿಕರಾದ ಅನಿಲ ಪತ್ತಾರ. ಪ್ರಸ್ತಾಪಿಸಿದರು.
ತಾಲೂಕು ಸಂಘಟಿಕರಾದ ಈರಣ್ಣ ಅಡಕಿ ನಿರೂಪಿಸಿದರು, ಎಸ್. ಬಿ ಮಲ್ಲಗೌಡರ ಸ್ವಾಗತಿಸಿದರು. ಶಿಕ್ಷಕಿ ಪಿ, ಜಿ, ಖೇಮಲಾಪುರೆ ವಂದಿಸಿದರು.

# ವಿದ್ಯಾರ್ಥಿಗಳು ಪಠ್ಯಪೂರಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು




**ಗುಳೇದಗುಡ್ಡ :** ವಿದ್ಯಾರ್ಥಿ ಜೀವನದಲ್ಲಿ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳು ಎರಡೂ ಮುಖ್ಯ. ಪಠ್ಯೇತರ ಚಟುವಟಿಕೆಗಳಿಂದ ಮನಸ್ಸು, ದೇಹ ಎರಡೂ ಸದೃಢಗೊಂಡು ಉತ್ತಮ ವ್ಯಕ್ತಿತ್ವ ರೂಪಿಸಲು ಸಹಾಯಕವಾಗುತ್ತದೆ ಎಂದು ವೆಂಕಟೇಶ ಕನ್ನಡ ಮಾಧ್ಯಮ ಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯ ರಘು ಕಾಟವಾ ಹೇಳಿದರು.
ಸ್ಥಳೀಯ ಪಿಇಟಿ ಇಂಟರ್ನ್ಯಾಶನಲ್ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಪಠ್ಯೇತರ ಚಟುವಟಿಕೆಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ವಿದ್ಯಾರ್ಥಿಗಳು ಜೀವನದಲ್ಲಿ ಶಿಸ್ತನ್ನು ಅಳವಡಿಸಿಕೊಳ್ಳಬೇಕು. ಶಿಕ್ಷಕರ ಮಾರ್ಗದರ್ಶನದಲ್ಲಿ ಕಲಿಕೆಯನ್ನು ಮುಂದುವರಿಸಬೇಕು ಎಂದರು.
ಈ ಸಂದರ್ಭದಲ್ಲಿ ಪಿಇಟಿ ಗೌರವಕಾರ್ಯದರ್ಶಿ ರವೀಂದ್ರ ಪಟ್ಟನಶೆಟ್ಟಿ, ಶಾಲೆಯ ಚೇರಮನ್ ಪುರುಷೋತ್ತಮ ಝಂವರ, ಸಂಸ್ಥೆಯ ಸದಸ್ಯರಾದ ಎಸ್.ಎಸ್. ನಾಯನೇಗಲಿ, ಲಕ್ಷ್ಮೀನಿವಾಸ ಕಾಬ್ರಾ, ಅಮಾತೆಪ್ಪಾ ಕೊಪ್ಪಳ, ಪ್ರಾಚಾರ್ಯ ನಾಗರಾಜ ಬಾವಿ, ಅರುಣ ಕಾಟವಾ ಹಾಗೂ ಶಿಕ್ಷಕರು ಉಪಸ್ಥಿತರಿದ್ದರು.

# ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅಂಗನವಾಡಿ ನೌಕರರ ಪ್ರತಿಭಟನೆ, ಕೇಂದ್ರಕ್ಕೆ ಮನವಿ

**ವಿಜಯಪುರ :** ಕೇಂದ್ರ ಸರಕಾರ 2024-25ರ ಬಜೆಟ್‌ನಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆಗೆ ಸಾಕಷ್ಟು ಹಣಕಾಸು ಮೀಸಲಿಡಬೇಕು, ಅಂಗನವಾಡಿಗಳನ್ನು ಬಲಪಡಿಸಲು ಮತ್ತು ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಶಾಸನಬದ್ಧ ಸೌಲಭ್ಯಗಳನ್ನು ಒದಗಿಸುಬುದು ಸೇರಿದಂತೆ ಹಲವಾರು ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಅಂಗನವಾಡಿ ನೌಕರರು ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿ ಮೂಲಕ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಮನವಿ ಸಲ್ಲಿಸಿದರು.
ರಾಜ್ಯ ಅಂಗನವಾಡಿ ನೌಕರರ ಸಂಘ ಹಾಗೂ ವಿಜಯಪುರ ತಾಲೂಕು ಸಂಘದ ನೇತೃತ್ವದಲ್ಲಿ ವಿವಿಧ ಬೇಡಿಕೆಗಳನ್ನು ಮುಂದಿಟ್ಟು ಮನವಿ ಸಲ್ಲಿಸಲಾಯಿತು.
ಈ ಸಂದರ್ಭದಲ್ಲಿ ಜಿಲ್ಲಾ ಅಧ್ಯಕ್ಷೆ ಸುನಂದಾ ನಾಯಕ ಅವರು ಮಾತನಾಡಿ, ಇದೇ ತಿಂಗಳು ಮಂಡಿಸಲಿರುವ 2024-25 ರ ಮುಂಗಡಪತ್ರದಲ್ಲಿ ಈ ದೇಶವು ಮೂರನೇ ಆರ್ಥಿಕತೆಯಾಗಲು ತೀವ್ರವಾಗಿ ಪ್ರಯತ್ನಿಸುತ್ತಿರುವಾಗ, ನಮ್ಮ ಸಮಾಜದಲ್ಲಿನ ಅಸಮಾನತೆಗಳನ್ನೂ ಸಹ ಕಡಿಮೆ ಮಾಡಬೇಕು ಮತ್ತು ನಾಗರಿಕರ ಆರೋಗ್ಯ ಮತ್ತು ಯೋಗಕ್ಷೇಮವನ್ನು ಆದ್ಯತೆಯ ಆಧಾರದ ಮೇಲೆ ಖಾತ್ರಿಪಡಿಸಬೇಕು ಎಂಬುದನ್ನು ತಾವು ಬಹುಶಃ ಒಪ್ಪಬಹುದು. ದುರದೃಷ್ಟವಶಾತ್, ಈ ಹಿಂದೆ ಇಂತಹದ್ದನ್ನು ಮಾಡಲಾಗಿಲ್ಲ. ಇದರ ಪರಿಣಾಮವಾಗಿಯೇ, ನಮ್ಮ ಜನರಲ್ಲಿ, ವಿಶೇಷವಾಗಿ ಮಹಿಳೆಯರು



ಮತ್ತು ಮಕ್ಕಳಲ್ಲಿ ಅತಿ ಹೆಚ್ಚು ಅಪೌಷ್ಟಿಕತೆಯ ಸವಾಲನ್ನು ನಮ್ಮ ದೇಶವು ಗಂಭೀರವಾಗಿ ಎದುರಿಸುತ್ತಿದೆ. NFHS -6 ಇದು ನೀಡಿರುವ ಮಾಹಿತಿ ಪ್ರಕಾರ, ನಮ್ಮ ಐದಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲಿ ಮೂರನೇ ಒಂದು ಭಾಗದಷ್ಟು ಮಕ್ಕಳು ಕುಂಠಿತ ಬೆಳವಣಿಗೆಯವರು ಅಂದರೆ, ಅಗತ್ಯಕ್ಕಿಂತ ಕಡಿಮೆ ತೂಕ ಮತ್ತು ಕಡಿಮೆ ಎತ್ತರದ ಬಡಕಲು ದೇಹದವರು ಆಗಿದ್ದಾರೆ. ರಕ್ತಹೀನತೆಯ ಮಟ್ಟವು ಮಹಿಳೆಯರಲ್ಲಿ ಶೇ.57ಕ್ಕೂ ಹೆಚ್ಚು, ಹದಿಹರೆಯದ ಅಂದರೆ ಕಿಶೋರಿಯರಲ್ಲಿ ಶೇ.59.1 ರಷ್ಟು, ಗರ್ಭಿಣಿಯರಲ್ಲಿ ಶೇ.52.2 ರಷ್ಟು ಮತ್ತು ಆರು ವರ್ಷದೊಳಗಿನ ಮಕ್ಕಳಲ್ಲಿ ಶೇ. 67.1 ರಷ್ಟು ಹೆಚ್ಚಿದೆ. ನಮ್ಮ ದೇಶದಲ್ಲಿ ಪ್ರತಿ ವರ್ಷ ಸರಾಸರಿ ಆರು ವರ್ಷದೊಳಗಿನ ಸುಮಾರು 9 ಲಕ್ಷ ಮಕ್ಕಳು ಸಾಯುತ್ತಿದ್ದಾರೆ ಎಂದರು.
ಸಂಪೂರ್ಣವಾಗಿ ಮೂಲಭೂತ ಸೌಕರ್ಯ ಮತ್ತು ಉತ್ತಮ ಗುಣಮಟ್ಟದ ಆಹಾರದೊಂದಿಗೆ ICDS ಯೋಜನೆಯನ್ನು ಬಲಪಡಿಸಿ, ಸಾಕಷ್ಟು ಸಂಪನ್ಮೂಲಗಳೊಂದಿಗೆ ಅಂಗನವಾಡಿ ಕೇಂದ್ರಗಳನ್ನು ಪೂರ್ಣ ಸಮಯದ ಅಂಗನವಾಡಿಗಳಾಗಿ ಜೊತೆಜೊತೆಗೆ ಪಾಲನಾ ಕೇಂದ್ರ (ಕ್ರಿಚ್) ಆಗಿ ಅಭಿವೃದ್ಧಿಪಡಿಸಬೇಕು,
ಅಂಗನವಾಡಿಗಳಲ್ಲಿಯೇ ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣ (ECCE)। ಶಾಲಾಪೂರ್ವ ಶಿಕ್ಷಣ ಘಟಕಾಂಶಗಳನ್ನು ಬಲಪಡಿಸಿ ECCE/ ಶಾಲಾಪೂರ್ವ ಶಿಕ್ಷಣವು ಔಪಚಾರಿಕ ಶಿಕ್ಷಣ ವ್ಯವಸ್ಥೆಯ ಭಾಗವಾಗಿರಲೇಬಾರದು. ಅಂಗನವಾಡಿ ಕೇಂದ್ರಗಳನ್ನು ನೋಡಲ್ ಏಜೆನ್ಸಿಗಳಾಗಿ ಜಾರಿಗೊಳಿಸುವುದರ ಜೊತೆಗೆ ಇಅಅಇ ಹಕ್ಕಾಗಬೇಕು.
ಗ್ರೇಡ್ ಖಖಖ ಮತ್ತು ಗ್ರೇಡ್ ಖಗಿ ಸರ್ಕಾರಿ ನೌಕರರಂತೆ ಅಂಗನವಾಡಿ ಕಾರ್ಯಕರ್ತರು ಮತ್ತು ಸಹಾಯಕರನ್ನು ಖಾಯಂ ಮಾಡಿ, ಖಾಯಮಾತಿ ವಿಷಯ, 45 ನೇ ILC ಶಿಫಾರಸಿನ ಪ್ರಕಾರ ತಿಂಗಳಿಗೆ ಕನಿಷ್ಠ ವೇತನ ರೂ. 26000, ಮಾಸಿಕ ಪಿಂಚಣಿ ರೂ. 10000, ಪಿಎಫ್, ಇಎಸ್‌ಐ ಇತ್ಯಾದಿ ಕೂಡಲೇ ತೀರ್ಮಾನಿಸಿ ಜಾರಿ ಮಾಡಿ, ದೇಶಾದ್ಯಂತ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಏಕರೂಪದ ಸೇವಾ ಷರತ್ತುಗಳನ್ನು ಜಾರಿಗೆ ತರಬೇಕು. ಎಲ್ಲಾ ಯೋಜನಾ ಕಾರ್ಮಿಕರಿಗೆ ಅನ್ವಯವಾಗುವಂತೆ ಕೂಡಲೇ ವೇತನ ಆಯೋಗ ರಚನೆ ಮಾಡಬೇಕು.
ಗ್ರಾಚ್ಯುಟಿ ಕುರಿತು ಸುಪ್ರೀಂ ಕೋರ್ಟ್ ಆದೇಶವನ್ನು ಅಂಗನವಾಡಿ ಕಾರ್ಯಕರ್ತೆಯರು ಸಹಾಯಕಿಯರಿಗೆ ತಕ್ಷಣವೇ ಜಾರಿಗೊಳಿಸಬೇಕು,
ಅಂಗನವಾಡಿ ನೌಕರರು ಮತ್ತು ಸಹಾಯಕಿಯರಪ್ರಜಾಸತ್ತಾತ್ಮಕಹಕ್ಕುಗಳನ್ನು ಮತ್ತು ಕಾರ್ಮಿಕ ಸಂಘಟನೆ ಕಟ್ಟಿಕೊಳ್ಳುವ ಹಕ್ಕುಗಳನ್ನು ಗುರುತಿಸಿ ಎಲ್ಲಾ ಹಂತಗಳಲ್ಲಿ ದ್ವಿಪಕ್ಷೀಯ ಕಾರ್ಯವಿಧಾನವನ್ನು ಅಭಿವೃದ್ಧಿಪಡಿಸಬೇಕು. ಯಾವುದೇ ರೂಪದಲ್ಲಿ ICDS ಅನ್ನು ಖಾಸಗೀಕರಣಗೊಳಿಸಬಾರದು.
ಸಾರ್ವಜನಿಕ ವಲಯದ ಉದ್ಯಮಗಳು ಮತ್ತು ಸೇವೆಗಳನ್ನೂ ಕೂಡ ಖಾಸಗೀಕರಣ ಮಾಡಬಾರದು.
ಶ್ರಮಿಕರಿಗೆ ಮಾರಕವಾಗಿರುವ ಕಾರ್ಮಿಕ ಸಂಹಿತೆಗಳನ್ನು ರದ್ದುಪಡಿಸಬೇಕು ಎಂದರು.
ಇದೇ ಸಂದರ್ಭದಲ್ಲಿ ಸಿಐಟಿಯು ಪ್ರಧಾನ ಕಾರ್ಯದರ್ಶಿ ಲಕ್ಷ್ಮಣ ಹಂದ್ರಾಳ ಅವರು ಮಾತನಾಡಿದರು.

## ಜೆಸಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಅರ್ಥಪೂರ್ಣ ಪತ್ರಿಕಾ ದಿನಾಚರಣೆ

# ಪತ್ರಿಕೆಗಳು ಸಮಾಜದ ಕೈಗನ್ನಡಿ: ಶಿವಾನಂದ ತಿಪ್ಪಾ



**ಮಹಾಲಿಂಗಪುರ :** ಪತ್ರಿಕೆಗಳು ಸಮಾಜದ ಕೈಗನ್ನಡಿಯಾಗಿ ಸಾರ್ವಜನಿಕರಿಗೆ ನಿತ್ಯ ಸುದ್ದಿ ಸಮಾಚಾರಗಳ ಮೂಲಕ ಜ್ಞಾನವನ್ನು ಪಸರಿಸುತ್ತಿವೆ ಎಂದು ನವ ಚೇತನ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಶಿವಾನಂದ ತಿಪ್ಪಾ ಹೇಳಿದರು.

ಶುಕ್ರವಾರ ಪಟ್ಟಣದ ಕಾನಿಪ ಸಂಘ ಮಹಾಲಿಂಗಪುರದ ಸಹಯೋಗದಲ್ಲಿ ಜೆಸಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಜರುಗಿದ ಪತ್ರಿಕಾ ದಿನಾಚರಣೆ ಸಮಾರಂಭದಲ್ಲಿ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಅವರು ಪತ್ರಿಕೆಗಳು ಸಮಾಜದ ಓರೆ ಕೋರೆಗಳನ್ನು ತಿದ್ದುತ್ತಾ, ಸಂವಿಧಾನದ ನಾಲ್ಕನೇ ಅಂಗವಾಗಿ ಕಾರ್ಯನಿರ್ವಹಿಸುತ್ತಿವೆ. ನಿತ್ಯ ಸುದ್ದಿಯನ್ನು ಸಂಗ್ರಹಿಸುವ ಪತ್ರಕರ್ತರ ಸಾಮಾಜಿಕ ಜವಾಬ್ದಾರಿಯು ಮಹತ್ವದ್ದಾಗಿದೆ ಎಂದರು.

ಪತ್ರಕರ್ತರಾದ ಚಂದ್ರಶೇಖರ ಮೋರೆ ಮಾತನಾಡಿ ಮಹಾಲಿಂಗಪುರ ಕಾನಿಪ ಸಂಘದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಶಿಕ್ಷಣ ಸಂಸ್ಥೆಗಳು ಪತ್ರಿಕಾ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸುವ ಮೂಲಕ ಪತ್ರಿಕೆಗಳು ಮತ್ತು ಪತ್ರಕರ್ತರ ಕಾರ್ಯವನ್ನು ಗುರುತಿಸಿದ್ದು ಶ್ಲಾಘನೀಯ. ವಿದ್ಯಾರ್ಥಿಗಳು ಪತ್ರಿಕೆಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದರು. ಕಾನಿಪ ಅಧ್ಯಕ್ಷ ಮಹೇಶ ಮನ್ನಯ್ಯನವರಮಠ, ಪತ್ರಕರ್ತರಾದ ಜಯರಾಮಶೆಟ್ಟಿ, ಲಕ್ಷ್ಮಣ ಕಿಶೋರ ಮಾತನಾಡಿದರು.

**ಗಮನ ಸೆಳೆದ ಪತ್ರಿಕೆಗಳ ರೂಪಕ :**

ಶಾಲೆಯ ಪ್ರಾಥಮಿಕ ವಿಭಾಗದ ರುಶಾಂಕ ಜಂಬಗಿ ಉದಯವಾಣಿ ಪತ್ರಿಕೆಯ ರೂಪಕ ಧರಿಸಿ ಗಮನ ಸೆಳೆದನು. ವಿದ್ಯಾರ್ಥಿಗಳಾದ ಅದ್ವಿತ ಹೆರಕಲ್, ಮುಜಾಹಿದ್ ಬೂದಿಹಾಳ, ಆದಿತ್ಯ ಇಂಗಳಗಾಂವಿ, ಆಫ್ರಾಜ್ ಮುಂಡಗನೂರ, ಕೌಟಿಲ್ಯ ಪರದೇಶಿ, ಅದ್ವೀಕ್ ಬಾಪ್ರೀ, ಶಂಕರ ಅಂಗಡಿ, ಶಿವಕುಮಾರ ಮಾಂಗ, ಸಿದ್ದಾರ್ಥ ಬಡಿಗೇರ, ನಕುಲ್ ಮೂಡಲಗಿ, ಕನಿಸ್ಕಾ ಜುಗಳಿ ಅವರು ಕನ್ನಡದ ಹೆಸರಾಂತ ದಿನಪತ್ರಿಕೆಗಳ ಪತ್ರಿಕೆಗಳ ಇತಿಹಾಸ ಮತ್ತು ಸ್ಥಳಿಯ ಪತ್ರಕರ್ತರ ಮಾಹಿತಿಯನ್ನು ತಿಳಿಸುವ ರೂಪಕ ಪ್ರದರ್ಶಿಸುವ



ಮೂಲಕ ವೈಶಿಷ್ಟ್ಯಪೂರ್ಣವಾಗಿ ಪತ್ರಿಕಾ ದಿನಾಚರಣೆಗೆ ಸಾಕ್ಷೀಯಾದರು.

ಶಾಲೆಯ 10ನೇ ತರಗತಿಯ ವಿದ್ಯಾರ್ಥಿಗಳು ನಡೆಸಿಕೊಟ್ಟ ದೂರದರ್ಶನ ಮತ್ತು ಮುದ್ರಣ ಮಾಧ್ಯಮ ಪತ್ರಿಕೆಗಳ ನಡುವಿನ ನಾ ಹೆಚ್ಚು? ನಾನು ಶ್ರೇಷ್ಠ ಸಂವಾದ ಕಾರ್ಯಕ್ರಮವು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಶಾಲೆಯ ಆಡಳಿತ ಮಂಡಳಿ ಅಧ್ಯಕ್ಷ ಶಾಂತಿಲಾಲ ಪಟೇಲ್ ಅಧ್ಯಕ್ಷತೆವಹಿಸಿದ್ದರು. ಶಾಲೆಯ ಆಡಳಿತ ಮಂಡಳಿ ಸದಸ್ಯರಾದ ಈಶ್ವರ ಮುರಗೋಡ, ರಮೇಶ ಮುಳವಾಡ, ಶಾಲೆಯ ಮುಖ್ಯಗುರುಗಳಾದ ಎಸ್.ಜಿ.ಕೌಜಲಗಿ, ನಾರಗೌಡ ಉತ್ತಂಗಿ, ಪತ್ರಕರ್ತರಾದಎಸ್.ಎಸ್.ಈಶ್ವರಪ್ಪಗೋಳ, ಮೀರಾ ತಟಗಾರ, ಹಣಮಂತ ನಾವ್ಹಿ ಸೇರಿದಂತೆ ಹಲವರು ಇದ್ದರು.

# ತಂತ್ರಜ್ಞಾನ ಯುಗದಲ್ಲಿ ಶಿಕ್ಷಣವೇ ದೊಡ್ಡ ಆಸ್ತಿ: ದಿವಾಣ



**ಜಮಖಂಡಿ :** ಸುಂದರ ಜೀವನಕ್ಕಾಗಿ ಶಿಕ್ಷಣ, ಜೀವನ ಮಾರ್ಗ ತೋರಿಸಿದ ಗುರುಗಳು, ತಂದೆ–ತಾಯಿ ಮತ್ತು ಹಿರಿಯರುನ್ನು ಗೌರವಿಸಬೇಕು. ಪಠ್ಯದಷ್ಟೆ ಸಹಪಠ್ಯ ಚಟುವಟಿಕೆಗಳಿಗೆ ಮಹತ್ವ ಕೊಡಬೇಕೆಂದು ಮುಧೋಳದ ಹಿರಿಯ ಸಾಹಿತಿ ಸಿದ್ದು ದಿವಾನ ಹೇಳಿದರು

ನಗರದ ಬಾಲಕರ ಸರಕಾರಿ ಪ.ಭಾ. ಪದವಿಪೂರ್ವ ಕಾಲೇಜಿನ ಸಭಾಭವನದಲ್ಲಿ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ವಿದ್ಯಾರ್ಥಿಗಳ ಮನಸ್ಸಿನಲ್ಲಿ ಸ್ಪಷ್ಟವಾದ ಗುರಿ ಇದ್ದರೇ, ಗುರಿಯನ್ನು ಯಶಸ್ವಿಯಾಗಿ ಮುಟ್ಟಲು ಸಾಧ್ಯವಿದೆ.. ಶಿಕ್ಷಣ ಪ್ರತಿಯೊಬ್ಬರ ಅವಶ್ಯಕವಾಗಿದ್ದು, ಶಿಕ್ಷಣ ನೀಡುವದು ಪಾಲಕರ, ಪೋಷಕರ ಪ್ರಮುಖ ಕರ್ತವ್ಯವಾಗಿದೆ. ತಂತ್ರಜ್ಞಾನ ಯುಗದಲ್ಲಿ ಶಿಕ್ಷಣಗಿಂತದೊಡ್ಡಆಸ್ತಿಬೇರೆಯಾವುದುಅಲ್ಲ ಎಂದರು. ಪ್ರಾಚಾರ್ಯ ಸುರೇಶ ಬಿರಾದಾರ ಅಧ್ಯಕ್ಷತೆ ವಹಿಸಿ ಮಾತನಾಡಿದರು. ನಿವೃತ್ತ ನೌಕರರ ಸಂಘದ ಅಧ್ಯಕ್ಷ ಎಚ್. ಎಂ.ಶೆಟ್ಟರ, ಪ್ರಧಾನ ಕಾರ್ಯದರ್ಶಿ ಸಿದ್ದನಗೌಡ ನ್ಯಾಮಗೌಡ, ಉಪನ್ಯಾಸಕರಾದ ಸುನೀಲ ಕೋರೆ, ಭವಾನಿ ಗುಗ್ಗರಿ, ಶಂಕರ ಸಂಗಾನಟ್ಟಿ, ಶ್ರೀಕಾಂತ ಮಾದರ, ಶ್ರೀದೇವಿ ಪಾಟೀಲ, ರಾಜಕುಮಾರ ಗವಳಿ, ತುಕಾರಾಮ ಪೊತೆಗೋಳ, ಹಣಮಂತ ಕಾಂಬಳೆ, ಸ್ವಾತಿ ಬಿರಾದಾರ ಸಹಿತ ಹಲವರು ಇದ್ದರು.

ಇದೇ ಸಂದರ್ಭದಲ್ಲಿ ಚಂದ್ರಶೇಖರ ಮೇಗಾಡೆ ಅವರಿಗೆ ಶ್ರೀಗುರುದೇವ ರಾನಡೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ನಂತರ ಶಾಲಾ ಸಂಸತ್ ಪ್ರಮಾಣ ವಚನವನ್ನು ಕರಿಯಪ್ಪ ಪೂಜಾರಿ ಬೋಧಿಸಿದರು.

ಉಪನ್ಯಾಸಕಿ ಬಿ.ಎಸ್.ಭಾಗೋಜಿ ಪ್ರಾರ್ಥಿಸಿದರು. ಉಪನ್ಯಾಸಖ್ರುಅಧ ಸಿ.ಎಸ್. ಜನಗೊಂಡ ಸ್ವಾಗತಿಸಿದರು ಡಾ. ಲಿಂಗಾನಂದ ಗವಿಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ವ್ಹಿ.ಆರ್.ಬೊಮ್ಮನಹಳ್ಳಿ ಅಥಿತಿಗಳನ್ನು ಪರಿಚಯಿಸಿದರು. ಉಪನ್ಯಾಸಕಿ ಪಿ.ಕೆ.ನಾಯ್ಕ ನಿರೂಪಿಸಿದರು. ಉಪನ್ಯಾಸಕ ಹಣಮಂತ ನಾಯಕ ವಂದಿಸಿದರು.

# ಮನುಕುಲದ ಉಳಿವಿಗೆ ಪರಿಸರ ರಕ್ಷಣೆ ಅಗತ್ಯ: ಪ್ರಭುಶ್ರೀ

## ಚಿಮ್ಮಡದಲ್ಲಿ ಸಸಿ ನೆಡುವ ಕಾರ್ಯಕ್ರಮ | ನಿವೃತ್ತ ಅಧಿಕಾರಿಯ ಪರಿಸರ ಪ್ರೇಮ



**ಚಿಮ್ಮಡ :** ಮನುಕುಲ, ಪಕ್ಷಿ ಸಂಕುಲ ಸೇರಿದಂತೆ ಸಕಲ ಜೀವರಾಶಿಗಳ ಉಳಿವಿಗೆ ಹಸಿರು ಪರಿಸರ ಕಾಪಾಡಿಕೊಳ್ಳುವ ಅಗತ್ಯತೆ ಹೆಚ್ಚಿದೆ ಎಂದು ಚಿಮ್ಮಡ ವಿರಕ್ತಮಠದ ಶ್ರೀ ಪ್ರಭು ಮಹಾಸ್ವಾಮಿಗಳು ಹೇಳಿದರು.

ಗ್ರಾಮದ ಗುಡ್ಡದ ಪ್ರಭುಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ನಿವೃತ್ತ ವಲಯ ಅರಣ್ಯಾಧಿಕಾರಿ ವಾಸುದೇವ ಇಗವೆಯವರು ಆಯೋಜಿಸಿದ್ದ "ಸಸಿ ನೆಡುವ ಕಾರ್ಯಕ್ರಮ"ದ ಸಾನಿಧ್ಯವಹಿಸಿ ಮಾತನಾಡಿದ ಅವರು ಅಭೀವೃದ್ಧಿ, ಆದುನಿಕತೆಯ ಭರಾಟೆಯಲ್ಲಿ ಲಕ್ಷಾಂತರ ಗಿಡ, ಮರಗಳನ್ನು ಕಡಿದು ಹಾಕಲಾಗುತ್ತಿದೆ. ಅದಕ್ಕೆ ಪ್ರತಿಯಾಗಿ ಸಾವಿರಾರು ಗಿಡಗಳನ್ನು ನೆಡಲಾಗುತ್ತಿದೆ ಆದರೆ ಅವುಗಳ ಪೋಷಣೆ ಮಾಡದ್ದರಿಂದ ಶೇ. 90 ರಷ್ಟು ಗಿಡಗಳು ಹಾಳಾಗುತ್ತಿವೆ ಇಂಥಹ ಸಂದರ್ಬದಲ್ಲಿ ವಾಸುದೇವ ರವರು ನಿವೃತ್ತಿ ಹೊಂದಿದ್ದರು ಪರಿಸರ ಬೆಳೆಸುವ ಅವರ ಕಾಳಜಿ ಮಾದರಿಯಾಗಿದೆ ಎಂದರು.

ಸ್ಥಳಿಯ ರಘುನಾಥ ಪ್ರೀಯ ಸಾಧು ಮಹಾರಾಜರ ಮಠದ ಶ್ರೀ ಜನಾರ್ಧನ ಮಹಾರಾಜರು ಮಾತನಾಡಿ ಗ್ರಾಮದ ಯುವಕರ ಕಾಳಜಿಯಿಂದ ಗ್ರಾಮದ ಬಂಜರು ಪ್ರದೇಶ ಇಂದು ಹಸಿರು ತಾಣವಾಗಿದೆ. ಗುಡ್ಡದ ದೇವಸ್ಥಾನ ಇಂದು ವಣಸಿರಿ ಪ್ರಭುಲಿಂಗೇಶ್ವರ ದೇವಸ್ಥಾನವಾಗಿದೆ ಎಂದರು.

ನಿವೃತ್ತ ವಲಯ ಅರಣ್ಯಾಧಿಕಾರಿ ವಾಸುದೇವ ಇಗವೆ ಪ್ರಾಸ್ತಾವಿಕವಾಗಿ ಮಾತನಾಡಿ ಪ್ರಭುಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ನೆಡಲಾಗಿರುವ 1500 ಗಿಡಗಳ ಜಾತಿ, ಅವುಗಳಿಂದ ಮನುಕುಲಕ ದೊರೆಯುವ ಲಾಭಗಳ ಕುರಿತು ಮಾರ್ಮಿಕವಾಗಿ ವಿವರಿಸಿದರು.

ಬಸವೇಶ್ವರ ಯುವಕ ಸಂಘದ ಅಧ್ಯಕ್ಷ ಬಸವರಾಜ ಬಳಗಾರ, ಪತ್ರಕರ್ತ ಇಲಾಹಿ ಜಮಖಂಡಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಇದೇ ಸಂಧರ್ಬದಲ್ಲಿ ಪರಿಸರ ರಕ್ಷಣೆಗೆ ನೆರವಾದ ಹಲವು ಮಹನಿಯರನ್ನು ಸತ್ಕರಿಸಲಾಯಿತು.

# ವಿಶ್ವದಲ್ಲಿ ರೋಟರಿಸಂಸ್ಥೆ ಸಾಮಾಜಿಕ ಸೇವೆಯಲ್ಲಿ ತೊಡಗಿದೆ



**ಜಮಖಂಡಿ :** ವಿಶ್ವದಲ್ಲಿ ರೋಟರಿ ಸಂಸ್ಥೆಯು ಸಾಮಾಜಿಕ ಸೇವೆಯಲ್ಲಿ ತೊಡಗಿಕೊಂಡಿದೆ. ಪಲ್ಸ್ ಪೋಲೀಯೋ ಯೋಜನೆಯಲ್ಲಿ ಸರಕಾರದೊಂದಿಗೆ ಕೈಜೋಡಿಸಿ ವಿಕಲ ಚೇತನಯನ್ನು ಕಡಿಮೆಗೊಳಿಸಿದೆ. ನಮ್ಮ ಮತ್ತು ಸಂಸ್ಥೆಯ ಉದ್ದೇಶ ಕೇವಲ ಸಾಮಾಜಿಕ ಸೇವೆಯಾಗಿದೆ ಎಂದು ರೋಟರಿಸಂಸ್ಥೆ ನೂತನ ಅಧ್ಯಕ್ಷ ಕಿರಣಕುಮಾರ ದೇಸಾಯಿ ಹೇಳಿದರು.

ನಗರದ ರಮಾನಿವಾಸ ಸಭಾಭವನದಲ್ಲಿ ಶುಕ್ರವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜು. 14 ರಂದು ಸಂಜೆ 6 ಗಂಟೆಗೆ ಮೈಗೂರ ರಸ್ತೆಯಲ್ಲಿರುವ ಪಂಚಮಸಾಲಿ ಸಮುದಾಯ ಭವನದಲ್ಲಿ ರೋಟರಿ ಸಂಸ್ಥೆ ಹಾಗೂ ಇನ್ನರವೀಲ್ ಕ್ಲಬ್‌ದ ನೂತನ ಪದಾಧಿಕಾರಿಗಳಿಗೆ ಅಧಿಕಾರ ಹಸ್ತಾಂತರ ಕಾರ್ಯಕ್ರಮ ನಡೆಯಲಿದೆ ಎಂದರು. ರೋಟರಿ ಸಂಸ್ಥೆ ನಮ್ಮನ್ನು ನಾವು ಸದಾ ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಳ್ಳುವುದು ಇದರ ಉದ್ದೇಶವಾಗಿದೆ. ಆರೋಗ್ಯ, ಶಿಕ್ಷಣ, ಕೃಷಿಗೆ ಹಾಗೂ ಸ್ವಚ್ಚತೆಗೆ ಹೆಚ್ಚು ಆದ್ಯತೆ ನೀಡುವ ಮೂಲಕ ಒಂದು ವರ್ಷದಲ್ಲಿ ಉತ್ತಮ ಸೇವೆಗಳನ್ನು ಹಮ್ಮಿಕೊಂಡಿದ್ದೇವೆ.

ಪತ್ರಿಕಾಗೋಷ್ಠಿಯಲ್ಲಿ ಉಪಾಧ್ಯಕ್ಷ ಮುತ್ತುರಾಜ ಅತ್ತೆಪ್ಪವರ, ಕಾರ್ಯದರ್ಶಿ ಮಲ್ಲಪ್ಪ ಬುಜರುಕ, ಖಜಾಂಚಿ ಶಂಕರ ಪಟ್ಟಣಶೆಟ್ಟಿ, ಸದಸ್ಯರಾದ ಪ್ರಕಾಶ ಶಿಂಧೆ, ರಾಜಶೇಖರ ಕೊವಳ್ಳಿ, ಸುಭಾಷ ಕಾಶಿದ, ಡಾ.ಮಲ್ಲೇಶ ಪೂಜಾರಿ, ಗೋಪಾಲಕೃಷ್ಣ ಪ್ರಭು, ಬಸವರಾಜ ಬಳಗಾರ, ಶ್ರೀಧರ ಕಾಖಂಡಕಿ, ಇನ್ನರವೀಲ್ ಸಂಸ್ಥೆ ಅಧ್ಯಕ್ಷೆ ಅಲ್ಕಾ ಮಾಳಗಿ, ಕಾರ್ಯದರ್ಶಿ ಗಿರಿಜಾ ಮೈತ್ರಿ ಸಹಿತ ಹಲವರು ಇದ್ದರು.

# ರಂಗಾಯಣ ಕಲಬುರಗಿದ್ದೊ...?
# ಅಥವಾ ಏಳೂ ಜಿಲ್ಲೆಗಳದ್ದೊ...?



ಕಳೆದ 12 ವರ್ಷಗಳಿಂದ ಕಲ್ಯಾಣ ಕರ್ನಾಟಕ (ಹೈದರಾಬಾದ್ ಕರ್ನಾಟಕ ) ವಿಭಾಗದಲ್ಲಿ ರಾಜ್ಯ ಸರ್ಕಾರದ ಸಾಂಸ್ಕೃತಿಕ ಸ್ವಾಯತ್ತ ಸಂಸ್ಥೆಯಾಗಿ ಕಲಬುರ್ಗಿ ರಂಗಾಯಣ ಕೆಲಸ ಮಾಡುತ್ತಿದೆ.

ಈ ರಂಗಾಯಣವು ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಾದ *ಬೀದರ್, ಕಲಬುರಗಿ, ರಾಯಚೂರು, ಯಾದಗಿರಿ,ಬಳ್ಳಾರಿ, ವಿಜಯನಗರ ಮತ್ತು ಕೊಪ್ಪಳ* ಜಿಲ್ಲೆಯ ರಂಗಭೂಮಿಗೆ ಸಂಬಂಧಿತ ಸರಕಾರದ ಸಾರ್ವಜನಿಕ ಸಂಸ್ಥೆಯಾಗಿದೆ.

ದುರಂತವೆನಂದರೆ ಈ ರಂಗಾಯಣವು ಕಲಬುರ್ಗಿ ಜಿಲ್ಲೆಗೆ ಮಾತ್ರ ಸಿಮಿತವಾದಂತೆ ಭಾಸವಾಗಿದೆ,ಕಾರಣ ಯಾಕೆ ಈ ವಿಷಯವನ್ನ ಪ್ರಸ್ತಾಪ ಮಾಡತಿದಿನಿ ಅಂದ್ರೆ ಏಳು ಜಿಲ್ಲೆಗಳನ್ನು ಒಳಗೊಂಡಂತೆ, ರಂಗಾಯಣ ಅತಿ ಹೆಚ್ಚು ನಟ–ನಟಿಯರ ಆಯ್ಕೆಯಾಗುವುದು, ಕಲಬುರ್ಗಿಯಿಂದ, ಮಕ್ಕಳ ಶಿಬಿರಗಳನ್ನ ನಡೆಸುವ ನಿರ್ದೇಶಕರ ಆಯ್ಕೆ, ಮಕ್ಕಳ ನಾಟಕಗಳ ನಿರ್ದೇಶಕರ ಆಯ್ಕೆಯು ಕಲಬುರ್ಗಿಯವರೇ, ರಂಗಾಯಣದ ಹಲವು ಯೋಜನೆಗಳಿಗೆ ಸಂಯೋಜಕ ನಿರ್ದೇಶಕರ ಆಯ್ಕೆ ಕಲಬುರ್ಗಿ ಜಿಲ್ಲೆಯ ರಂಗಕರ್ಮಿಗಳ ಹೆಸರೆ ಅಲ್ಲಿಯ ದಾಖಲಾತಿಯಲ್ಲಿ ಕಾಣಸಿಗುತ್ತವೆ. ಬೆರಳೆಣಿಕೆಯಲ್ಲಿ ಹೊರಗಿನ ನಿರ್ದೇಶಕರು ಬಂದು ಕೆಲಸ ಮಾಡಿದ್ದು ನೆನಪಿದೆ.

ತರಬೇತಿಯೊಂದಿಗೆಕಾಲೇಜುರಂಗೋತ್ಸವ ಒಂದನ್ನು ಬಿಟ್ಟರೆ ಬೇರೆ ಯಾವ ಯೋಜನೆಗಳು ನಾಟಕೋತ್ಸವ, ವಿಚಾರ ಸಂಕಿರಣಗಳು, ಚರ್ಚೆ–ಸಂವಾದಗಳು. ಈ ಉಳಿದ ಜಿಲ್ಲೆಗಳಿಗೆ ತಲುಪಿದ್ದು ಬಹಳ ಕಡಿಮೆ.

ಈ ಭಾಗದಲ್ಲಿ ರಂಗಾಯಣದ ಚಟುವಟಿಕೆಗಳು ಶುರುವಾಗಿ 12 ವರ್ಷಗಳು ಕಳೆದಿವೆ, ಮೂರು ಜನ ರಂಗಾಯಣ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಾರೆ, ಒಂದು ಬಾರಿ ಬೀದರ್ ಜಿಲ್ಲೆಯಿಂದ ನಿರ್ದೇಶಕರಾಗಿ ಆಯ್ಕೆಯಾದರೆ, ಎರಡೂ ಅವಧಿಗೆ ಗುಲಬರ್ಗಾ ಜಿಲ್ಲೆಯ ವ್ಯಕ್ತಿಗಳೆ ನಿರ್ದೇಶಕರಾಗಿ ಆಯ್ಕೆ ಆಗಿದ್ದಾರೆ. ಕಲ್ಯಾಣ ಕರ್ನಾಟಕ ವ್ಯಾಪ್ತಿಯ ಈ ರಂಗಾಯಣವು ಸಾಮಾಜಿಕ ನ್ಯಾಯದಡಿ ಏಳೂ ಜಿಲ್ಲೆಗಳಿಗೆ ಸಂಭಂದಿಸಿದ್ದು ಉಳಿದ ಜಿಲ್ಲೆಗಳಾದ ಕೊಪ್ಪಳ, ರಾಯಚೂರು,ಬಳ್ಳಾರಿ, ವಿಜಯನಗರ ಮತ್ತುಯಾದಗಿರಿಈಜಿಲ್ಲೆಗಳಿಂದಈವರೆಗೂ ಯಾರೂ ರಂಗಾಯಣದ ನಿರ್ದೇಶಕರಾಗಿ, ರೆಪರ್ಟರಿಯ ಪ್ರಮುಖ ನಾಟಕಗಳ ನಿರ್ದೇಶಕರಾಗಿ, ಪ್ರಮುಖ ಯೋಜನೆಗಳ ಸಂಯೋಜಕ ಅಥವಾ ನಿರ್ದೇಶಕರಾಗಿ, ಸಂಘಟಕರಾಗಿ ಕೆಲಸ ಮಾಡಿರುವ ದಾಖಲೆಗಳೇ ಇಲ್ಲಾ ಇಂತವುಗಳಿಗೆ ಉಳಿದ ಜಿಲ್ಲೆಗಳಿಂದ ಆಯ್ಕೆ ಆಗದೆ ಇರುವ ಪಾಪ ರಂಗಕರ್ಮಿಗಳ,ಕಲಾವಿದರುಗಳ ದುರದೃಷ್ಟಕ ಸಂಗತಿ.

ರಾಜ್ಯದಲ್ಲಿ ಸರಕಾರ ರಚನೆಯಾಗಿ ಒಂದು ವರ್ಷ ಕಳೆದರು ರಾಜ್ಯದ ಆರು ರಂಗಾಯಣಗಳಿಗೆ ನಿರ್ದೇಶಕರ ಆಯ್ಕೆಯಾಗಿಲ್ಲಾ ಕೆಲವು ದಿನಗಳ ಬೆಳವಣಿಗೆಯ ಪ್ರಕಾರ 12–7–2024 ರ ಪ್ರಜಾವಾಣಿ ಪತ್ರಿಕೆಯಲ್ಲಿ (ಕಲಬುರಗಿ) ಒಂದು ಸುದ್ದಿ ಪ್ರಕಟವಾಗಿದೆ ಅದು ಹೀಗಿದೆ " ಕಲಬುರಗಿ ರಂಗಾಯಣಕ್ಕೆ ಹಿರಿಯ ರಂಗಕರ್ಮಿ ಶಂಕ್ರಯ್ಯ ಘಂಟಿ, ಸಾಹಿತಿ ಮತ್ತು ಪತ್ರಕರ್ತ ಮಹಿಪಾಲ್ ರೆಡ್ಡಿ, ರಂಗ ಕಲಾವಿದ ಸಂದೀಪ್, ಈ ಮೂರು ಹೆಸರುಗಳನ್ನ ಸಿ ಬಸಲಿಂಗಯ್ಯ ಅವರ ಶಿಫಾರಸ್ಸಿನ ಮೇರೆಗೆ ರಂಗಸಮಾಜ ಅಂತಿಮ ಗೊಳಿಸಿದೆ.

ಮುಖ್ಯ ಮಂತ್ರಿ ಸಿದ್ದರಾಮಯ್ಯನವರು ಮೂವರಲ್ಲಿಒಬ್ಬರನ್ನಆಯ್ಕೆಮಾಡಬಹುದು ಎಂದು " ಪ್ರಜಾವಾಣಿ ತನ್ನ ವರದಿಯಲ್ಲಿ ತಿಳಿಸಿದೆ. ಈ ಕಲ್ಯಾಣ ಕರ್ನಾಟಕ ಅಥವಾ ಉತ್ತರ ಕರ್ನಾಟಕ ಭಾಗದಲ್ಲಿ ಸರಕಾರಕ್ಕೆ ಸಲಹೆ ನೀಡುವವರು ಯಾರು ಇಲ್ಲವೆ ? ಪದೆ ಪದೆ ಬೆಂಗಳೂರು ಮತ್ತು ಮೈಸೂರು ಭಾಗದವರು ಸಲಹೆ ನೀಡೊದು ಎಷ್ಟಸರಿ ? ಈ ಭಾಗದ ಹಿರಿಯ ಬುದ್ದಿಜೀವಿಗಳು ಸರ್ಕಾರಕ್ಕೆ ಸಲಹೆ ಕೊಟ್ಟಿದ್ದರೆ (ಕಲಬುರಗಿ ಮತ್ತು ಬೀದರ್ ಬಿಟ್ಟು )ಉಳಿದ ಜಿಲ್ಲೆಯ – ರಂಗಕರ್ಮಿಗಳ ಹೆಸರು ಇರುತ್ತಿದ್ದವೆನೊ !! ಈ 5 ಜಿಲ್ಲೆಗಳಲ್ಲಿ ಸಕ್ರಿಯವಾಗಿ ಕೆಲಸ ಮಾಡುವ ರಂಗಕರ್ಮಿಗಳೆ ಇಲ್ಲವೆ ?

ರಂಗ ಚಟುವಟಿಕೆಗಳೇ ನಡೆಯುತಿಲ್ಲವೆ ? ಸಮರ್ಥ ರಂಗಕರ್ಮಿಗಳನ್ನ ಹುಡುಕುವ ಪ್ರಯತ್ನ ರಂಗಸಮಾಜ ಮತ್ತು ಸರಕಾರ ಮಾಡಬೇಕಿದೆ.

ಈ ಬಾರಿಯು ಕಲ್ಬುರ್ಗಿಯ ಮೂರು ಜನರ ಶಿಫಾರಸ್ಸಿಗೆ ಹೆಸರುಗಳು ಕೇಳಿ ಬಂದಿದ್ದು ಬಹಳ ಬೇಸರ ತಂದಿದೆ.

ಇನ್ನೂ ಕಾಲ ಮಿಂಚಿಲ್ಲ ರಂಗ ಸಮಾಜ ಸರಕಾರ ಇದನ್ನುಗಮನಿಸಿ ಎಚ್ಚೆತ್ತುಕೊಂಡು ಆಯ್ಕೆಯನ್ನು ಪಾರದರ್ಶಕವಾಗಿ ಮಾಡಬೇಕು ಇಲ್ಲವಾದಲ್ಲಿ ಉಳಿದ ಜಿಲ್ಲೆಯ ಎಲ್ಲಾ ಕಲಾವಿದರ ಸಂಘಟನೆಯೊಂದಿಗೆ ಹೋರಾಟ ಮಾಡಬೇಕಾಗುತ್ತದೆ.

**–ಶರಣು ಶೆಟ್ಟರ್**
**ರಂಗಕರ್ಮಿ, ಕೊಪ್ಪಳ**
**8197808300**

# ಹಣ ಬಿಡುಗಡೆಗೆ ಒತ್ತಾಯಿಸಿ ಮನವಿ



**ಗುಳೇದಗುಡ್ಡ :** ಕಳೆದ ನಾಲ್ಕು ತಿಂಗಳಿನಿಂದ ಬಿಡುಗಡೆಯಾಗದೇ ಇರುವ ನ್ಯಾಯಬೆಲೆ ಅಂಗಡಿಕಾರರ ಕಮೀಷನ್ ಕೂಡಲೇ ಬಿಡುಗಡೆ ಮಾಡುವಂತೆ ಅಗ್ರಹಿಸಿ ಮಂಗಳವಾರ ಕರ್ನಾಟಕ ರಾಜ್ಯ ಸರಕಾರಿ ಪಡಿತರ ವಿತರಕರ ಗುಳೇದಗುಡ್ಡ ಘಟಕದ ವತಿಯಿಂದ ಉಪತಹಶೀಲ್ದಾರ ವೀರೇಶ ಬಡಿಗೇರ ಅವರಿಗೆ ಮನವಿ ಸಲ್ಲಿಸಲಾಯಿತು.

ತಾಲೂಕಿನ ನ್ಯಾಯಬೆಲೆ ಅಂಗಡಿಕಾರರು ಸರಕಾರ ನಿಗದಿಪಡಿಸಿದಂತೆ ಆಹಾರ ಧಾನ್ಯವನ್ನು ವಿತರಣೆ ಮಾಡುತ್ತಾ ಬಂದಿದ್ದೇವೆ. ಆದರೆ ನಮಗೆ ಕಮೀಷನ್ ಹಣ ಸರಿಯಾಗಿ ಸಂದಾಯವಾಗುತ್ತಿಲ್ಲ. ಕಳೆದ ಮಾರ್ಚ ತಿಂಗಳಿನಿಂದ ಜೂನ್ ತಿಂಗಳವರೆಗೆ ಕಮೀಷನ್ ಹಣ ಬಿಡುಗಡೆಯಾಗಿಲ್ಲ.

ಅಲ್ಲದೇ ಸುಮಾರು ಐದು ವರ್ಷಗಳಿಂದ ಇಕೆವೈಸಿ ಹಣವನ್ನು ನೀಡಿಲ್ಲ. ಇದರಿಂದ ನ್ಯಾಯಬೆಲೆ ಅಂಗಡಿ ನಿರ್ವಹಣೆ ಕಷ್ಟವಾಗಿದೆ. ಕೂಡಲೇ ಕಮೀಷನ್ ಹಾಗೂ ಇಕೆವೈಸಿ ಹಣ ನ್ಯಾಯಬೆಲೆ ಅಂಗಡಿಕಾರರಿಗೆ ನೀಡಬೇಕೆಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಈ ಸಂದರ್ಭದಲ್ಲಿ ಸಂಘದ ತಾಲೂಕು ಅಧ್ಯಕ್ಷ ಕುಮಾರ ಅಂಗಡಿ, ಉಪಾಧ್ಯಕ್ಷ ವೀರೇಶ ಮುರನಾಳ, ಕಾರ್ಯದರ್ಶಿ ರಾಜು ಹುಳಬುತ್ತಿ, ಹನಮಂತ ಕೌಜಗನೂರ, ಮನೋಹರ ಕೋಪರ್ಡೆ, ಹನಮಂತ ಛಬ್ಬಿ, ಮಹಾಂತೇಶ ಸಿಂದಗಿ, ಪ್ರದೀಪ ಹುಲ್ಲೂರ, ಕುಮಾರ ಗಂಗಾವತಿ, ಚೇತನ್ ಜಾನಿಕಲ್, ಪ್ರಕಾಶ ಪಾತ್ರೋಟಿ, ಹೊನ್ನಪ್ಪ ಕೊಳಗದ, ಗೌಡಪ್ಪ ಆಡಗಲ್ಲ, ಹನಮಂತ ಯಂಡಿಗೇರಿ, ಎಂ.ಎ. ಮುಲ್ಲಾ, ಲಕ್ಷ್ಮಣ ಜೂಳಿ, ದಾವಲ ಕಲಬುರ್ಗಿ, ಶ್ರೀಶೈಲ ಗಂಗಶೆಟ್ಟಿ, ಮಲ್ಲಪ್ಪ ಮುರನಾಳ, ವಿಠ್ಠಲ ಹಾದಿಮನಿ, ಜಯಶ್ರೀ ಬರಹಾಣಪೂರ, ಶಾರದಾ ಹೊಸಮನಿ ಮತ್ತಿತರರು ಇದ್ದರು.

# ಡೆಂಗ್ಯೂ ಕುರಿತು ಜಾಗೃತಿ



**ಹುಬ್ಬಳ್ಳಿ :** ಡೆಂಗ್ಯೂ ಮಹಾಮಾರಿಯ ಕುರಿತಂತೆ ಹು–ಧಾ ಮಹಾನಗರ ಪಾಲಿಕೆ ಕೈಗೊಂಡಿರುವ ನಿಯಂತ್ರಣ ಜವಾಬ್ದಾರಿಯ ಕುರಿತು ಸಮತಾ ಸೇನಾ ಕರ್ನಾಟಕ ವತಿಯಿಂದ ಮಾಹಿತಿ ಕರಪತ್ರ ಹಂಚುವ ಮೂಲಕ ಹುಬ್ಬಳ್ಳಿಯಲ್ಲಿ ಡೆಂಗ್ಯೂ ಕುರಿತು ಜಾಗೃತಿ ಮೂಡಿಸಲಾಯಿತು.

ನಗರದ ಚೆನ್ನಮ್ಮ ವೃತ್ತ, ಬಸ್ ನಿಲ್ದಾಣ, ಮಿನಿ ವಿಧಾನಾಸೌಧ, ಕೆ.ಎಸ್.ಆರ್.ಟಿ.ಸಿ ಬಸ್ ಗಳಲ್ಲಿ ಹಾಗೂ ಇತರೆ ಸ್ಥಳಗಳಲ್ಲಿ ಪಾಲಿಕೆಯ ಮಾಹಿತಿ ಕರಪತ್ರಗಳನ್ನು ಹಂಚಲಾಯಿತು. ಈ ವೇಳೆ ಸಮತಾಸೇನಾ ರಾಜ್ಯಾಧ್ಯಕ್ಷ ಗುರುನಾಥ ಉಳ್ಳಿಕಾಶಿ, ರಘು ಬಸವಂತಕರ, ಕವಿತಾ ನಾಯ್ಕರ್, ಪರಶುರಾಮ ನಂದ್ಯಾಳ, ಮಂಜಣ್ಣಾ ಉಳ್ಳಿಕಾಶಿ, ಬಾಬರ ಖೋಜೆ ಸೇರಿದಂತೆ ಪದಾಧಿಕಾರಿಗಳು ಉಪಸ್ಥಿತರಿದ್ದರು.



# ಅಂತರಾಷ್ಟ್ರೀಯ ಇನ್ನರವೀಲ್‌ಸಂಸ್ಥೆ ಶತಮಾನೋತ್ಸವದ ಆಚರಣೆ

ಜಮಖಂಡಿ: ತಾಲೂಕಿನ ಸಿದ್ದಾಪೂರದ ಶ್ರೀ ಪ್ರಭುಲಿಂಗೇಶ್ವರ ಸಕ್ಕರೆ ಕಾರ್ಖಾನೆಯ ಆವರಣದಲ್ಲಿ ಇನ್ನರವೀಲ್ ಸಂಸ್ಥೆಯ ಅಧ್ಯಕ್ಷ ಆಶಾದೇವಿ ಗುಡಗುಂಟಿ ಅವರು ಇನ್ನರವೀಲ್ ಲಾಂಛನದ ಸ್ಥಂಭವನ್ನು ಉದ್ಘಾಟಿಸಿದರು.

ಇದೇ ಸಂದರ್ಭದಲ್ಲಿ ಡಿಸ್ಟಿಕ್ ಚೇರ್ಮನ್ ವೈಶಾಲಿ ಲೋಖಂಡೆ, ಕಾರ್ಯದರ್ಶಿ ಡಾ.ಅಶ್ವಿನಿ ಪೂಜಾರಿ ಸಹಿತ ಹಲವರು ಇದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State